

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 319 Saturday 31-08-2024 E-mail : maruti.b.hosamani76@gmail.com Page: 4 Price : Rs. 1/-


## ಆಕಸ್ಮಿಕವಾಗಿ ಕಾಲು ಜಾರಿ ಬಿದ್ದಿರುವ ಆಕಳನ್ನು ರಕ್ಷಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಯವರು



**ಕೌಲಗುಡ್ಡ :** ಬೆಳಗಾವಿ ಜಿಲ್ಲೆಯ ಕಾಗವಾಡ ತಾಲೂಕಿನ ಕೌಲಗುಡ್ಡ ಗ್ರಾಮದಲ್ಲಿ ವಿನಾಯಕ ಬಾಳಪ್ಪನವರ ಎಂಬುವವರ ಬಾವಿಯೊಂದರಲ್ಲಿ ಅದೆ ಗ್ರಾಮದ ಸಿದ್ದಪ್ಪ ತೇಲಿ ಎಂಬುವವರ ಆಕಳು ಕಾಲು ಜಾರಿ ಬಾವಿಯಲ್ಲಿ ಬಿದ್ದಿರುವ ಘಟನೆ ನಡೆದಿದೆ ತಕ್ಷಣ ಕೌಲಗುಡ್ಡ ಗ್ರಾಮದ ಸ್ಥಳೀಯರು ಅಥಣಿ ಅಗ್ನಿಶಾಮಕ ಠಾಣೆಗೆ ಕರೆ ಮಾಡಿ ತಿಳಿದಾಕ್ಷಣ ಘಟನಾ ಸ್ಥಳಕ್ಕೆ ಜಲ ವಾಹನ ಮತ್ತು ಸಿಬ್ಬಂದಿಯವರು

ಘಟನಾ ಸ್ಥಳಕ್ಕೆ ರಕ್ಷಣಾ ಸಾಮಗ್ರಿ ಗಳೊಂದಿಗೆ ಆಗಮಿಸಿ 50 ಅಡಿ ಆಳತೆಯ 30ಥ30 ವಿಸ್ತೀಣ9ದ ನೀರಿರುವ ಬಾವಿಯಲ್ಲಿ ಆಕಳನ್ನು ಪ್ರಾಣ ಪಣಕ್ಕೆ ಇಟ್ಟು ಕಷ್ಟ ಪಟ್ಟು ಸುಮಾರು 01:40 ಒಂದೂ ಗಂಟೆ ನಲವತ್ತು ನಿಮಿಷಗಳ ಕಾಲ ಕಾರ್ಯಚರಣೆಯನ್ನು ಮಾಡಿ ಆಕಳನ್ನು ಜೀವಂತವಾಗಿ ಬಾವಿಯಿಂದ ಹೊರ ತೆಗೆದು ರಕ್ಷಣೆ ಮಾಡಲಾಯಿತು.

ಆಕಳ ಪ್ರಾಣ ಕಾಪಾಡಿದ ಅಥಣಿ ಅಗ್ನಿಶಾಮಕ ಇಲಾಖೆಗೆ ಸಿಬ್ಬಂದಿ ಯವರುಗಳಿಗೆ ಸೇರಿದ ಜನ ಚಪ್ಪಾಳೆ ಮೂಲಕ ಧನ್ಯವಾದಗಳು ತಿಳಿಸಿದರು. ತಮ್ಮ ಪ್ರಾಣ ಪಣಕ್ಕೆ ಇಟ್ಟು ಜೀವ ಉಳಿಸಿವ ಕೆಲಸ ಅಗ್ನಿಶಾಮಕ ದಳದವರು ಮಾಡುತ್ತಾರೆ ಅವರ ಸೇವೆ ಅಮೋಘ ಎಂದು ಬಣಿಸಿದರು.

ಈ ರಕ್ಷಣಾ ಕಾರ್ಯಚರಣೆಯಲ್ಲಿ ಅಗ್ನಿಶಾಮಕ ಸಿಬ್ಬಂದಿಯಾದ ಪಸಾದೇವ.ಶಿಂಧೆ, ಪ್ರಶಾಂತ ಚವ್ಹಾಣ, ಆನಂದ.ಟಿ.ಆರ್, ಸಚಿನ ಹಲ್ಯಾಳ, ಅಕ್ಷಯ ಕೋಲಾಪುರೆ , ಸ್ಥಳೀಯರು ಕಾರ್ಯಾಚರಣೆಯಲ್ಲಿ ಹಾಜರಿದ್ದರು.

## ಸರ್ಕಾರ ಜಿಂದಾಲ್ ಜೊತೆ ಸೇರಿ ಭ್ರಷ್ಟಾಚಾರ ಮಾಡುತ್ತಿದೆ–ಆರ್.ಪಿ.ಐ ಆರೋಪ

**ಹೊಸಪೇಟೆ :** ಸುಮಾರು 11 ಸಾವಿರ ಕೋಟಿ ಸ್ಕ್ಯಾಮ್ ಮಾಡಲು ಸರ್ಕಾರ ಮುಂದಾಗಿದೆ ಆರ್ಪಿಐ ಪಕ್ಷದ ಜೆಸಿ ವೆಂಕಟರಮನಪ್ಪ ಆರೋಪ. ಸರ್ಕಾರ ಜಿಂದಾಲ್ ಕಂಪನಿ ಜೊತೆ ಸೇರಿ ಭ್ರಷ್ಟಾಚಾರದಲ್ಲಿ ಮುಳುಗಿದೆ ರೈತರ 3,677 ಎಕರೆ ಭೂಮಿಯನ್ನೂ ಎಕರೆಗೆ ಕೇವಲ 1.25 ಲಕ್ಷಕ್ಕೆ ಕೊಡಲು ಮುಂದಾಗಿ ಸುಮಾರು 11 ಸಾವಿರ ಕೋಟಿ ಸ್ಕ್ಯಾಮ್ ಮಾಡಲು ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಇದನ್ನು ಆರ್.ಪಿ.ಐ. ಪಕ್ಷ ಖಂಡಿಸುತ್ತಾ ಸರ್ಕಾರದ ಸ್ಕ್ಯಾಮ್ ಮಾಡಲು ಮುಂದಾಗಿರುವುದನ್ನು ತಡೆದು ಇಲ್ಲಿನ ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯಪಾಲರಿಗೆ ಮನವಿಯನ್ನು ಸಲ್ಲಿಸಿದರು.

ಆರ್.ಪಿ.ಐ ಪಕ್ಷದಿಂದ ಮತ್ತು ಸಮತಾ ಸೈನಿಕ ದಳ ಸಂಘಟನೆಯಿಂದ ರಾಜ್ಯ, ಸ್ಥಳೀಯ ಮತ್ತು ಸುತ್ತ ಮುತ್ತಲಿನ ಜಿಲ್ಲೆಯ ನಾಯಕರ ನಿಯೋಗ ಜಿಂದಾಲ್ ಗೆ ಕೊಡ ಮಾಡುವ ಭೂಮಿಯ ಸ್ಥಳಕ್ಕೆ ಭೇಟಿ ನೀಡಿ ರೈತ–ರಿಂದ ಮಾಹಿತಿ ಪಡೆದರು. ನಂತರ ಸುದ್ದಿಗಾರ ರೊಂದಿಗೆ ಮಾತನಾಡಿದ ಆರ್.ಪಿ.ಐ ಪಕ್ಷದ ರಾಜ್ಯ ಮಹಾ ಪ್ರಧಾನ ಕಾರ್ಯದರ್ಶಿ ಜೆ.ಸಿ. ವೆಂಕಟರಮಣಪ್ಪ ಮಾತನಾಡಿ ಇಲ್ಲಿನ ಸರ್ಕಾರಿ ಭೂಮಿಯಲ್ಲಿ ಸುಮಾರು ಜನ ರೈತರು ಬೆಳೆಗಳ ಇಟ್ಟುಕೊಂಡು ಜೀವನ ನಡೆಸುತ್ತಿರುತ್ತಾರೆ. ಆದರೆ ಇದನ್ನು ಪರಿಗಣನೆಗೆ ತೆಗೆದು ಕೊಳ್ಳದೆ ಸರ್ಕಾರ ಸುಮಾರು 3667 ಎಕರೆ ಭೂಮಿಯನ್ನು ಜಿಂದಾಲ್ ಕಂಪನಿಗೆ ಕೊಡಲು ತೀರ್ಮಾನ ಮಾಡಿದ್ದು, ಸದರಿ ಸ್ಥಳದಲ್ಲಿ 1 ಎಕರೆ ಭೂಮಿ ಬೆಲೆ ಸುಮಾರು 3 ಕೋಟಿ ಇದ್ದು, ಇದರ ಮೊತ್ತ ಸುಮಾರು 11,000 ಕೋಟಿ ಯಾಗುತ್ತದೆ. ಅಭಿವೃದ್ಧಿ ಪಡಿಸಲಾದ ಮೊತ್ತ ಶೇಕಡ 40% ಕಳೆದರೂ ಇದರ ಮೌಲ್ಯ 7 ಸಾವಿರ ಕೋಟಿಗಳು ಆಗುತ್ತದೆ. ಆದರೆ ಸರ್ಕಾರ ಈಗ 1667 ಎಕರೆಗೆ ಕೇವಲ 1.20 ಲಕ್ಷದಂತೆ 24.40 ಕೋಟಿ ನಿಗದಿ ಪಡಿಸಿದೆ. ಉಳಿದ 2000 ಎಕರೆಗೆ ಕೇವಲ 1.05 ಲಕ್ಷದಂತೆ ಸುಮಾರು 25 ಕೋಟಿ ನಿಗದಿ ಪಡಿಸಿದೆ. ಒಟ್ಟು 50 ಕೋಟಿಗೂ ಕಡಿಮೆ ದರಕ್ಕೆ ಮಾರಾಟ ಮಾಡಲು ನಿರ್ಧರಿಸಿರುವ ಕಾಂಗ್ರೆಸ್ ಸರ್ಕಾರದ ಗುಟ್ಟೇನು ಎಂದು ಪ್ರಶ್ನೆ ಮಾಡಿದ್ದಾರೆ. ಇದೇ ಸ್ಥಳಗಳಲ್ಲಿ ಉಳಿಮೆ ಮಾಡಿ ಕೊಂಡು ಜೀವನ ಮಾಡುತ್ತಿರುವ ರೈತರು ಸರ್ಕಾರಕ್ಕೆ ಒಂದು ಎಕರೆಗೆ 5 ಲಕ್ಷ ರೂಪಾಯಿಗಳು ಕೊಡುತ್ತೇವೆ. ನಮಗೆ ಕೊಟ್ಟು ಜೀವನ ಮಾಡಲು ಅವಕಾಶ ಕೊಡಿ ಎಂದರು ಸಹ



ರೈತರಿಗೆ ನೀಡದೇ, ಜಿಂದಾಲ್ ಕಂಪನಿಗೆ ಅತೀ ಕಡಿಮೆ ಬೆಲೆಗೆ ಸರ್ಕಾರಿ ಜಮೀನು ಮಾರಾಟ ಮಾಡಿ ಇದರಲ್ಲಿ ಕನಿಷ್ಠ 11 ಸಾವಿರ ಕೋಟಿ ಸ್ಕ್ಯಾಮ್ ಮಾಡಲು ಹೊರಟಿದೆ.

ಈ ಭಾಗದ ಎನ್.ಎಂ.ಡಿ.ಸಿ ಮತ್ತು ಲಕ್ಷ್ಮಿ ಮಿತ್ತಲ್ ಕಂಪನಿಯವರು 1 ಎಕರೆಗೆ 24 ಲಕ್ಷ ರೈತರಿಗೆ ಬೆಂಬಲ ಬೆಲೆ ಕೊಟ್ಟಿರುತ್ತಾರೆ. ಆದರೆ ಸರ್ಕಾರ 1 ಎಕರೆಗೆ ಕೇವಲ 1.25 ಲಕ್ಷಕ್ಕೆ ನಿಗದಿ ಮಾಡಿ ಕೊಡುತ್ತಿರುವುದು ನಾಚಿಕೆಗೇಡಿನ ಸಂಗತಿ. ಈಗಾಗಲೇ ಈ ಕಂಪನಿಗೆ ಸರ್ಕಾರದ ವತಿಯಿಂದ 14 ಸಾವಿರ ಎಕರೆಗೂ ಹೆಚ್ಚು ಭೂಮಿಯನ್ನೂ ಕೊಡಲಾಗಿದೆ, 15 ಸಾವಿರ ಕ್ಕೂ ಹೆಚ್ಚಿನ ಜನರಿಗೆ ಉದ್ಯೋಗ ಕೊಟ್ಟಿದ್ದಾರೆ ಅದರಲ್ಲಿ ಸ್ಥಳೀಯರಿಗೆ ಬೆರಳಣಿಕೆಯಲ್ಲಿ ಮಾತ್ರ ಇದ್ದು. ಅವರು ಡಿ ಗ್ರೇಡ್ ಉದ್ಯೋಗಿ ಗಳಾಗಿದ್ದಾರೆ ಎಂದು ಮಾಹಿತಿ ಇದೆ. ರೈತರ ಭೂಮಿಯನ್ನೂ ರೈತರಿಗೆ ಕೊಡಬೇಕು ಇಲ್ಲವಾದಲ್ಲಿ ಜಿಂದಾಲ್ ಕಾರ್ಖಾನೆಯನ್ನು ರೈತರೊಂದಿಗೆ, ವಿವಿಧ ಸಂಘಟನೆ ಗಳೊಂದಿಗೆ ಮುತ್ತಿಗೆ ಹಾಕಿ ಇಲ್ಲಿಂದಲೇ ವಿಧಾನ ಸೌಧದವರೆಗೆ ಪಾದಯಾತ್ರೆ ಮಾಡುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಪಕ್ಷದ ರಾಜ್ಯಾಧ್ಯಕ್ಷ ಆರ್.ಪಿ.ಐ ಸತೀಶ್ ಮಾತನಾಡಿ ರೈತರ ಭೂಮಿಗೆ ನಿಗದಿ ಮಾಡಿರುವ ಬೆಲೆ ಕೇಳಿದರೆ ನಾಚಿಕೆಗೇಡಿನ ಸರ್ಕಾರ ಎಂದು ಹೇಳಬಹುದು. ರೈತರು ಜೋಳ, ತೆಂಗು, ಮೆಕ್ಕೆಜೋಳ, ತೋಟ ಮಾಡಿದ್ದಾರೆ, ಇಂತಹ ಪಲವತ್ತಾದ ಭೂಮಿಯನ್ನೂ ರೈತರೇ 5 ಲಕ್ಷ ಎಕರೆಗೆ ಕೊಂಡು ಕೊಳ್ಳುತ್ತೇವೆ ಎಂದು ಮುಂದೆ ಬಂದರೆ ಸರ್ಕಾರ ರೈತರಿಗೆ ಕೊಡದೆ ಜಿಂದಾಲ್ ನೊಂದಿಗೆ ಏನೇನೋ ಒಳ ಒಪ್ಪಂದ ಮಾಡಿಕೊಂಡಿದೆ ಎಂದು ಗೊತ್ತಿಲ್ಲ, ರೈತರಿಗೆ ಕೇವಲ 1.25 ಸಾವಿಕ್ಕೆ ಕೊಡುತ್ತಿದ್ದೀರಾ ಎಂದರೆ ನಿಮ್ಮಂತ ಮೂರ್ಖ ಮುಖ್ಯಮಂತ್ರಿ ಮತ್ತು ಸರ್ಕಾರವನ್ನ ಖಂಡಿಸುತ್ತೇವೆ. ಉದ್ಯೋಗ ಸೃಷ್ಟಿ ಮಾಡಬೇಕೆಂದು ಬಹು ರಾಷ್ಟ್ರೀಯ ಕಂಪನಿಗಳಿಗೆ ಭೂಮಿಯನ್ನೂ ಕೊಡುತ್ತಿದ್ದೀರಿ ಆದರೆ ಈ ಕಂಪನಿಗಳು ಸ್ಥಳೀಯ ಕರ್ನಾಟಕದ ಭೂಮಿ, ನೀರು, ವಿದ್ಯುತ್ ತೆಗೆದು ಕೊಂಡು ಇವತ್ತು ಕರ್ನಾಟಕದ ಜನರಿಗೆ ಕನ್ನಡಿಗರಿಗೇ ಉದ್ಯೋಗ ಕೊಡುತ್ತಿಲ್ಲ, ಇಂದು ಕರ್ನಾಟಕ ದತ್ತ ಎಲ್ಲೂ ಹುಡುಕಿದರೂ 1. 25 ಲಕ್ಷಕ್ಕೆ 1 ಎಕರೆ ಅಲ್ಲ ಒಂದು ಗುಂಟೆ ಕೂಡ ಸಿಗುತ್ತಿಲ್ಲ. ಈ ಹಿಂದೆ 30 ರಿಂದ 60 ಲಕ್ಷಕ್ಕೆ ಹಲವು ಕಂಪನಿಗಳಿಗೆ ಮಾರಾಟ ಮಾಡಿದ್ದೀರಿ ಆದರೆ ಇಂದು 1.25 ಲಕ್ಷಕ್ಕೆ ಮಾರಾಟ ಮಾತ್ತಿದ್ದೀರಿ ಎಂದರೆ ಇದರಲ್ಲಿ ದೊಡ್ಡ ಅವ್ಯವಹಾರ ಭ್ರಷ್ಟಾಚಾರ ಸಿದ್ದರಾಮಯ್ಯ ಸರ್ಕಾರದ ಮೇಲೆ ಇದೆ ಅದರಲ್ಲೂ ಸರ್ಕಾರದ ಶಾಸಕರ ಸಚಿವರ ಮತ್ತು ಮುಖ್ಯ ಮಂತ್ರಿಗಳ ಮೇಲೆ ಭ್ರಷ್ಟಾಚಾರದ ಆರೋಪಗಳಿವೆ, ಕಣ್ಣಿಗೆ ಕಾಣುವಂತೆ ಇಂದು ಭ್ರಷ್ಟಾಚಾರ ಮಾಡುತ್ತಿದ್ದೀರಲ್ಲ ಇದನ್ನ ಖಂಡಿಸುತ್ತೇವೆ. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ರೈತರನ್ನು, ದಲಿತ ಸಂಘಟನೆಗಳನ್ನು, ಕೂಲಿ ಕಾರ್ಮಿಕರ ಸಂಘಗಳನ್ನು ಮತ್ತು ಇತರೆ ಸಂಘದವರನ್ನು ಸಂಪರ್ಕಿಸಿ ಸಂಘಟಿಸಿ ಜಿಂದಾಲ್ ಚಲೋ ಕಾರ್ಯಕ್ರಮಕ್ಕೆ ಚಾಲನೆ ಕೊಡಲಾಗುವುದು ಎಂದು ಹೇಳಿದರು. ಸರ್ಕಾರವು ರೈತರಿಗೆ ಅತಿ ಕಡಿಮೆ ಬೆಲೆ ಕೊಡುತ್ತಿರುವುದನ್ನು ಖಂಡಿಸಿ ಬಳ್ಳಾರಿ ಜಿಲ್ಲೆಯ ಆರ್.ಪಿ.ಐ ಪಕ್ಷದ ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯರಾದ ಎರಿಸ್ವಾಮಿ, ವಿಜಯನಗರ ಜಿಲ್ಲೆಯ ಆರ್.ಪಿ.ಐ ಪಕ್ಷದ ಅಧ್ಯಕ್ಷರಾದ ಮಾಬು ಸುಬಾನಿ, ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯರಾದ ವಿರೂಪಾಕ್ಷಪ್ಪ, ಜಿಲ್ಲಾ ಮುಖಂಡರಾದ ಹೇಮಂತ್ ರಾಜ್, ಎಸ್.ಟಿ ಘಟಕದ ಜಿಲ್ಲಾಧ್ಯಕ್ಷರು ವೀರೇಶ್, ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷ ರಾಜು, ಆಟೋ ಚಾಲಕ ಸಂಘದ ನಾಗು, ನಗರಾಧ್ಯಕ್ಷರಾದ ಹೇಮಂತ್ ರಾಜ್, ಧೂಪದಳ್ಳಿ ನಾಗಪ್ಪ, ಕೊಟ್ರೇಶ್, ಚಂದ್ರಶೇಖರ್ ಇತರರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್. ಹೊಸಪೇಟೆ**

## ಹುನಗುಂದ ಸಾರಿಗೆ ಘಟಕದಿಂದ ಕೃಷ್ಣಾಪುರ ಗ್ರಾಮಕ್ಕೆ ಬಸ್ಸಿನ ಸೌಲಭ್ಯಕ್ಕೆ ಆಗ್ರಹ



**ಹುನಗುಂದ :** ಹುನಗುಂದ ಪಟ್ಟಣದಿಂದ ಕೇವಲ 10, ಕಿಮೀ ಅಂತರದಲ್ಲಿರುವ ಚಟ್ನಿಹಾಳ ಗ್ರಾಮಕ್ಕೆ ಹುನಗುಂದ ಘಟಕದಿಂದ ಯಾವುದೇ ಬಸ್ಸುಗಳ ಸೌಕರ್ಯ ಇರದ ಕಾರಣ ಹುನಗುಂದ ಪಟ್ಟಣದಲ್ಲಿ ವಿದ್ಯಾಬ್ಯಾಸ ಮಾಡುತ್ತಿರುವ ಚಟ್ನಿಹಾಳ ಗ್ರಾಮದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಹುನಗುಂದ ಪಟ್ಟಣಕ್ಕೆ ತೆರಳಬಯಸುವ ಎಲ್ಲಾ ಗ್ರಾಮಸ್ಥರಿಗೆ ತುಂಬಾ ತೊಂದರೆಯಾಗುತ್ತಿದ್ದು ಅವರು ಇಲಕಲ್ಲ ಘಟಕದ ಬಸ್ಸಿನಲ್ಲಿ ಪ್ರಯಾಣಿಸಿ ಇಲಕಲ್ಲಿಗೆ ತಲುಪಿ ನಂತರ ಹುನಗುಂದ ಪಟ್ಟಣ–ಕ್ಕೆ ತೆರಳಬೇಕಾದ ಅನಿವಾರ್ಯತೆ ಎದುರಾಗಿದ್ದು ಹುನಗುಂದ ಘಟಕದಿಂದ ಅಮರಾವತಿ ನಿಡಸನೂರ ಮಾರ್ಗವಾಗಿ ಕರಡಿ ಮತ್ತು ಕೋಡಿಹಾಳ ಗ್ರಾಮಕ್ಕೆ ತೆರಳುವ ಬಸ್ಸುಗಳನ್ನು ನಿಡಸನೂರಿಂದ ಕೇವಲ 2 ಕೀ.ಮಿ ಅಂತರದಲ್ಲಿರುವ ಚಟ್ನಿಹಾಳ ಗ್ರಾಮಕ್ಕೆ ವಾಯಾ ಮಾಡಿಕೊಂಡು ಹೋಗುವಂತೆ ಕೋರಿ ಇಂದು ಚಟ್ನಿಹಾಳ ಗ್ರಾಮಸ್ಥರು ಮತ್ತು ಕರ್ನಾಟಕ ಯುವ ರಕ್ಷಣಾ ವೇದಿಕೆಯ ಸಹಯೋಗದಲ್ಲಿ ಶಾಸಕ ವಿಜಯಾನಂದ ಕಾಶಪ್ಪನವರಿಗೆ ಮತ್ತು ಹುನಗುಂದ ಘಟಕ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಂಬಲದಿನ್ನಿ ಗ್ರಾಮ ಪಂಚಾಯತ್ ಹಾಲಿ ಉಪಾಧ್ಯಕ್ಷರಾದ ಗ್ಯಾನಪ್ಪ ಮೂಲಿಮನಿ,ಸದಸ್ಯರಾದ ಸೋಮಪ್ಪ ಬೇಗಾರ್ ಮಾಜಿ ಸದಸ್ಯರಾದ ಗ್ಯಾನಪ್ಪ ಮೂಲಿಮನಿ, ರಮೇಶ್ ಪೂಜಾರಿ,ಮತ್ತು ಮಾಜಿ ಪಿಕೆಪಿಎಸ್ ಸದಸ್ಯರಾದ ರಾಮಪ್ಪ ಕಮರಿ ಮತ್ತು ಚಟ್ನಿಹಾಳ ಗ್ರಾಮದ ಮುಖಂಡರಾದ ಬಸವರಾಜ ಪೂಜಾರಿ,ರಾಮಪ್ಪ ತಳವಾರ್,ಶರಣಪ್ಪ ಕುರಿ,ಮತ್ತು ಕರ್ನಾಟಕ ಯುವ ರಕ್ಷಣಾ ವೇದಿಕೆಯ ತಾಲ್ಲೂಕಾ ಉಪಾಧ್ಯಕ್ಷರಾದ ನಿರುಪಾದಿ ನಾಯಕ್ ಮತ್ತು ತಾಲ್ಲೂಕಾ ಕಾರ್ಯದರ್ಶಿಗಳಾದ ಯಮನೂರ್ ಪುಣೆ ಅವರು ಉಪಸ್ಥಿತರಿದ್ದರು.

## ವಿಜೃಂಭಣೆಯಿಂದ ಜರುಗಿದ ಸೋಮಲಾಪುರ ಬಸವಣ್ಣ ದೇವರ ಜಾತ್ರೆ



**ಕಂದಗಲ್ :** ಸಮೀಪದ ಸೋಮಲಾಪುರ ಗ್ರಾಮದ ಮಹಿಮಾ ಪುರುಷ ತೀರ್ಥದಿಂದ ಲಕ್ವರೋಗ ನಿವಾರಣೆ ಮಾಡುವ ದೇವರು ಎಂದೇ ಪ್ರಸಿದ್ದಿ ಪಡೆದ ಬಸವಣ್ಣ ದೇವರ ಜಾತ್ರಾ ಮಹೋತ್ಸವ ಅತ್ಯಂತ ವಿಜೃಂಭಣೆಯಿಂದ ಜರುಗಿತು

ಜಾತ್ರೆಯ ಅಂಗವಾಗಿ ಬಸವಣ್ಣ ದೇವರ ಮೂರ್ತಿಗೆ ವಿಶೇಷ ರುದ್ರಾಭಿಷೇಕ್ ಸಹಸ್ರ ಬಿಲ್ವಾರ್ಚನೆ ಪೂಜೆ ಅಲಂಕಾರ ಮಹಾ ಮಂಗಳಾರತಿ ಗಣರಾಧನೆ ಜಂಗಮ ಪ್ರಸಾದ ಜಾತ್ರೆಗೆ ಬಂದ ಭಕ್ತರಿಗೆ ಪ್ರಸಾದ ವಿತರಣೆ ನೆಡೆಯಿತು. ಜಾತ್ರೆಯ ಅಂಗವಾಗಿ ರಸಮಂಜರಿ ಕಾರ್ಯಕ್ರಮ ವಿವಿಧ ಕ್ರೀಡೆಗಳು ನೆಡೆದವು.

## ಕೊಟ್ಟೂರು ಜಿಲ್ಲೆಯಾದ್ಯಂತ ಪೌತಿ ಖಾತೆಗಳ ಆಂದೋಲನ ಆರಂಭ



**ಕೊಟ್ಟೂರು:** ಹಗರಿಬೊಮ್ಮನಹಳ್ಳಿಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರ ದಶಕಗಳ ಸಮಸ್ಯೆಯಾದ ಪೌತಿ, ಪೋಡಿ, ಪಿಂಚಣಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿ ರೈತರ ಸಮಸ್ಯೆಗಳನ್ನು ಪರಿಹಾರ ಮಾಡಲಾಗಿತ್ತು. ಈ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಚಿಂತಿಸಲಾಗಿದ್ದು, ಇದರಲ್ಲಿ ಪ್ರಮುಖವಾಗಿ

ಸಮಸ್ಯೆಯಿರುವ ಪೌತಿಖಾತೆಗಳ ಸಮಸ್ಯೆಯನ್ನು ಇತ್ಯರ್ಥಪಡಿಸಲು ವಿಶೇಷ ಆಂದೋಲನ ಕೈಗೊಳ್ಳಲಾಗಿದೆ.

ಕ್ಷೇತ್ರದಲ್ಲಿ ಅಂದಾಜು 20 ಸಾವಿರಕ್ಕೂ ಹೆಚ್ಚು ಪೌತಿಖಾತೆಗಳು ಇರುವ ಬಗ್ಗೆ ಮಾಹಿತಿ ಇದೆ.

ಪೌತಿಖಾತೆಯಿಂದ ಕುಟುಂಬಸ್ಥರಿಗೆ ಜಮೀನು ಅಭಿವೃದ್ಧಿ ಪಡಿಸಲು ಸಾಲ ಸೌಲಭ್ಯಗಳನ್ನು ಪಡೆಯಲು, ಪ್ರಕೃತಿ ವಿಕೋಪದಿಂದ ಬೆಳೆ ಹಾನಿಯಾದಗ ಸರ್ಕಾರದಿಂದ ನೀಡಲಾಗುವ ವಿಮೆ/ಪರಿಹಾರಗಳನ್ನು ಪಡೆಯಲು, ಸಾರ್ವಜನಿಕ ಉದ್ದೇಶಕ್ಕೆ ಭೂ ಸ್ವಾಧೀನವಾದಗ ಪರಿಹಾರ ಪಡೆಯಲು ಅರ್ಹವಾಗುವುದಿಲ್ಲ.

ಇದರಿಂದ ಬಡ ರೈತರಿಗೆ ತುಂಬಾ ತೊಂದರೆ–ಯಾಗುತ್ತದೆ. ಬಹುತೇಕ ಪೌತಿಖಾತೆಗಳು 2–3 ತಲೆಮಾರುಗಳಿಂದ ದಾಖಲೆಗಳ ಕೊರತೆಯಿಂದ ಬಾಕಿ ಉಳಿದಿರುವ ಬಗ್ಗೆ ಮಾಹಿತಿಯಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ : ಕಂ ಇ 33 ಟಿ ಆರ್ ಎಂ 2019(ಇ ) ದಿನಾಂಕ 17/10/2020 ರಂದು ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ : ಕಂ ಇ 33 ಟಿ ಆರ್ ಎಂ 2019(ಇ ) ದಿನಾಂಕ : 2019 (ಇ )10/01/2024 ಹೊರಡಿಸಲಾದ ಸುತ್ತೋಲೆಯಲ್ಲಿ ದಾಖಲೆಗಳ ಕೊರತೆಯಿದ್ದಾಗ ಪೌತಿಖಾತೆಗಳನ್ನು ಯಾವ ಮಾನದಂಡದಲ್ಲಿ ಕ್ರಮವಹಿಸಬೇಕು ಎಂಬುದರ ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಸದರಿ ಸುತ್ತೋಲೆಗಳ ಆಧಾರದ ಮೇಲೆ ಆಗತ್ಯ ಕ್ರಮವಹಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಕೋರಲಾಗಿತ್ತು. ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪತ್ರ ಸಂಖ್ಯೆ ಸಂ/ಕಂ/ಆರ್.ಆರ್.ಟಿ/40/2024–25 ದಿನಾಂಕ 26.08.2024 ರಂತೆ ಪೌತಿ ಆಂದೋಲನ ಕೈಗೊಳ್ಳಲು ಎಲ್ಲ ತಹಶಿಲ್ದಾರವರಿಗೆ ಸೂಚನೆ ನೀಡಲಾಗಿದೆ.

ನಮ್ಮ ವಿಧಾನಸಭಾ ಕ್ಷೇತ್ರವನ್ನು ಪೌತಿಖಾತೆ ಮುಕ್ತ ಕ್ಷೇತ್ರವನ್ನಾಗಿಸಲು ಸಂಕಲ್ಪ ಮಾಡಿದ್ದು, ನಮ್ಮ ಕ್ಷೇತ್ರ ವ್ಯಾಪ್ತಿಯ ಎಲ್ಲ ಗೌರವಾನ್ವಿತ "ರೈತ" ಬಾಂದವರು ತಮ್ಮ ಗ್ರಾಮದ ಗ್ರಾಮ ಆಡಳಿತ ಅಧಿಕಾರಿಗಳಿಗೆ/ಗ್ರಾಮ ಸಹಾಯಕರಿಗೆ ತಮ್ಮ ಅರ್ಜಿ ಮತ್ತು ದಾಖಲೆಗಳನ್ನು ಸಲ್ಲಿಸಲು ಈ ಮೂಲಕ ರೈತರಲ್ಲಿ

## ಮಲ್ಲಮ್ಮಳ ಆದರ್ಶ ಬದುಕು ನಮಗೆ ದಾರಿ ದೀಪ–ನಾವದಗಿ ಶ್ರೀ



**ತಾಳಿಕೋಟಿ :** ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ತನ್ನ ಭಕ್ತಿಯ ಮೂಲಕ ಸಹನಾ ಶಕ್ತಿಯನ್ನು ಪಡೆದುಕೊಂಡು ಅತ್ತಿಗೆ ಮನೆಯವರು ನೀಡಿದ ಎಲ್ಲ ರೀತಿಯ ಹಿಂಸೆಯನ್ನು ಸಹಿಸಿ ದೈವತ್ವ ಸ್ಥಾನವನ್ನು ಪಡೆದುಕೊಂಡಳು ಅವಳ ಆದರ್ಶ ಬದುಕು ನಮಗೆ ದಾರಿದೀಪ ವಾಗಿದೆ ಎಂದು ನಾವದಗಿ ಶ್ರೀ ಪರ್ವತೇಶ್ವರ ಸಂಸ್ಥಾನ ಬ್ರಹನ್ಮಠದ ಷ.ಬ್ರ.ರಾಜಗುರು ಶ್ರೀ ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ತಾಲೂಕಿನ ಬ.ಸಾಲವಾಡಗಿ ಗ್ರಾಮದಲ್ಲಿ ಶ್ರಾವಣ ಮಾಸದ ನಿಮಿತ್ಯ ಹಮ್ಮಿಕೊಂಡ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮಳ ಮಹಾಪುರಾಣದಲ್ಲಿ ಬಿತ್ತಿರಾಶಿ ಮಾಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದರು. ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮಹಿಳೆಯರು ಹೇಗೆ ಬದುಕ ಬೇಕೆಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟಿದ್ದಾಳೆ. ಭಕ್ತಿ ದಾನ ಧರ್ಮಗಳ ಮೂಲಕ ಎಂಥ ಸಂಕಷ್ಟವನ್ನಾದರೂ ಎದುರಿಸಬಹುದು ಎಂಬುದನ್ನು ಅವಳು ಹೊಲದಲ್ಲಿ ಭಕ್ತಿಯಿಂದ ಉಸುಕನ್ನು ಬಿತ್ತಿ ಜೋಳದ ರಾಶಿಯನ್ನು ಮಾಡಿ ತೋರಿಸಿದ ಘಟನೆಯೇ ಸಾಕ್ಷಿಯಾಗಿದೆ. ಅವಳ ಈ ಆದರ್ಶ ಬದುಕನ್ನು ನಾವೆಲ್ಲರೂ ಅನುಸರಿಸುವ ಅಗತ್ಯ ಇದೆ ಎಂದರು. ಐತಿಹಾಸಿಕ ಬಿತ್ತುವ ಹಾಗೂ ರಾಶಿ ಮಾಡುವ ಕಾರ್ಯಕ್ರಮದಲ್ಲಿ ಪ್ರವಚನಕಾರ ವೇ.ಮೂ.ಬಸವಲಿಂಗಯ್ಯ ಶಾಸ್ತ್ರಿಗಳು ಹಿರೇಮಠ ಸಿಂಧನೂರು ಒಳಗೊಂಡು ಮಲ್ಲಮ್ಮನ ಅಪಾರಭಕ್ತರು ಇದ್ದರು.

## ರಾಮ್ ಗಿರಿ ಮಹಾರಾಜರ ವಿರುದ್ಧ ಮುಸ್ಲಿಂ ಸಂಘಟನೆಗಳ ಒಕ್ಕೂಟದಿಂದ ರಾಜ್ಯ ಹೆದ್ದಾರಿ ಬಂದ್ ಮಾಡಿ ಭಾರಿ ಪ್ರತಿಭಟನೆ

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲೆಯ ಮುಧೋಳ್ ನಗರದಲ್ಲಿ ಮುಸ್ಲಿಂ ಸಂಘಟನೆಗಳ ಒಕ್ಕೂಟದಿಂದ ನಗರದ ಬಸವೇಶ್ವರ ವೃತ್ತದ ಬಳಿ ರಾಯಚೂರ್ – ನಿಪ್ಪಾಣಿ ರಾಜ್ಯ ಹೆದ್ದಾರಿ ಕೆಲವು ಕಾಲ ಬಂದ್ ಮಾಡಿ ಮಹಾರಾಷ್ಟ್ರದ ರಾಮಗಿರಿ ಸ್ವಾಮಿ ಮಹಾರಾಜರ ವಿರುದ್ಧ ಆಕ್ರೋಶವನ್ನು ಹೊರ ಹಾಕಿದರು.

ರಾಮಗಿರಿ ಮಹಾರಾಜ್ ಅವರು ಮೂಲತಃ ಮಹಾರಾಷ್ಟ್ರ ರಾಜ್ಯದವರು ಪ್ರವಾದಿ ಮಹಮ್ಮದ್ ಪೈಗಂಬರ್ ರವರ ಬಗ್ಗೆ ಅಕ್ಷಪಾರ್ಹ ಹೇಳಿಕೆ ಮತ್ತು ಧರ್ಮ ನಿಂದನೆ ಮಾಡಿದ್ದರು . ಇವರ ಹೇಳಿಕೆ ಮತ್ತು ಧರ್ಮನಿಂದನೆ ಅತಿ ಖಂಡನೀಯವಾಗಿದ್ದು ಆದ್ದರಿಂದ ಇವರಿಗೆ ಕಠಿಣ ಶಿಕ್ಷೆಗೆ ಒಳಪಡಿಸಬೇಕು, ಹಾಗೂ ಮುಫ್ತಿ ಸಲ್ಮಾನ್ ಅಝುಹರಿ ಅವರನ್ನು ತಕ್ಷಣ ಬಿಡುಗಡೆಯನ್ನು ಮಾಡಿ ನ್ಯಾಯವನ್ನು ಒದಗಿಸಬೇಕೆಂದು ಮುಧೋಳ ತಾಲೂಕ




ದಂಡಾಧಿಕಾರಿಗಳಮೂಲಕರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಾವೀದ್ ಹಾಗೂ ರಮೀಜ್ ಹವಾಲ್ದಾರ್ ಮಾತನಾಡಿ ಭಾರತ ದೇಶದಲ್ಲಿ ನಾವೆಲ್ಲರೂ ಒಂದು ಎಂದು ಸಹೋದರತ್ವಭಾವನೆಯಿಂದ ಈ ದೇಶದಲ್ಲಿ ಒಗ್ಗಟ್ಟಾಗಿದ್ದೇವೆ. ಇಂತಹ ಸಂದರ್ಭದಲ್ಲಿ ಈ ಸ್ವಾಮೀಜಿ ನಮ್ಮಲ್ಲಿ ಒಡಕುಂಟು ಮಾಡಿ ಹಿಂದೂ – ಮುಸ್ಲಿಂ ನಡುವೆ ಕೋಮು ದ್ವೇಷ ಹಾಗೂ ಕೋಮುಗಲಭೆ ಸೃಷ್ಟಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ ಆದಕಾರಣ ಇಂತಹ ಸ್ವಾಮೀಜಿಯವರ ಮೇಲೆ ಸರ್ಕಾರ ಕೂಡಲೇ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಇಲ್ಲವಾದಲ್ಲಿ ನಾವುಗಳು ಈ ಹೋರಾಟವನ್ನು ಇಲ್ಲೇ ಬಿಡುವುದಿಲ್ಲ ಮುಂದೆ ಉಗ್ರ ಹೋರಾಟವನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆಯನ್ನು ನೀಡಿದರು.

ಈ ಸಂದರ್ಭದಲ್ಲಿ ಆರ್ಟಿಐ ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತ ಫಜಲ್ ಮೋಮಿನ್, ಜನತಾ ಸುಲ್ತಾನ್ ಸಂಘಟನಾ ಅಧ್ಯಕ್ಷ ಶಫೀಕ್ ಬೆಪಾರಿ, ರೈತ ಮುಖಂಡರಾದ ಎಲ್ಲಪ್ಪ ಹೆಗಡೆ, ಡಿಎಸ್ಎಸ್ ಅಧ್ಯಕ್ಷ ಪ್ರಕಾಶ್ ಮಾಂಗ್, ತಾಲೂಕ ಭೀಮ್ ಆರ್ಮಿಯ ಶೇಖರ್ ಕಾಂಬಳೆ, ಸೋಶಿಯಲ್ ಡಿಮಾಕ್ರ ಟಿಕ್ ಪಾರ್ಟಿ ಆಫ್ ಇಂಡಿಯಾದ ಮುಧೋಳದ ರಾಜ ಭಕ್ಷ್ ಜಮಾದಾರ್, ಮೌಲಾ ಮೋಮಿನ್ ಹಲವಾರು ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

**ವರದಿ : ಮಹಿಬೂಬ್ ಬಾರಿಗಡ್ಡಿ**

# ಉಪಕಾರ ಸ್ಮರಣೆಗೆ ರೈತರಿಂದ ಕೃಷ್ಣೆಗೆ ಕೃಷ್ಣಾರಾರತಿ: ಸಂಗಮೇಶ



**ಜಮಖಂಡಿ :** ಉತ್ತರಪ್ರದೇಶದ ಗಂಗಾರತಿ ಮಾದರಿಯಲ್ಲಿ ವಿಶೇಷವಾಗಿ ನಮ್ಮ ಭಾಗದ ಜೀವನದಿ ಕೃಷ್ಣಾನದಿಗೆ ಕೃಷ್ಣಾರಾರತಿ, ಬಾಗಿಣ ಅರ್ಪಣೆ ಕಾರ್ಯಕ್ರಮವನ್ನು ಅಗಷ್ಟ 26ರಂದು ಹಮ್ಮಿಕೊಳ್ಳಲು ರೈತರು ತೀರ್ಮಾರ್ಣ ಕೈಗೊಂಡಿರುವ ಹಿನ್ನಲೆಯಲ್ಲಿ ಅದ್ದೂರಿಯಾಗಿ ಆಚರಿಸಲು ಸಕಲ ಸಿದ್ಧತೆಗಳು ಚಾಲನೆಗೊಂಡಿವೆ ಎಂದು ನಿರಾಣಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ಸಂಗಮೇಶ ನಿರಾಣಿ ಹೇಳಿದರು.

ತಾಲೂಕಿನ ಹಿಪ್ಪರಗಿ ಗ್ರಾಮದ ಶ್ರೀ ಸಂಗಮೇಶ್ವರ ದೇವಸ್ಥಾನದ ಸಭಾಭವನದಲ್ಲಿ ಶುಕ್ರವಾರ ಕೃಷ್ಣಾಷ್ಟಮಿ ಜಯಂತಿ ನಿಮಿತ್ತ ಜೀವನದಿ ಕೃಷ್ಣಾನದಿಗೆ ಬಾಗಿಣ ಅರ್ಪಣೆಮತ್ತುಕೃಷ್ಣಾರಾರತಿ ಬೃಹತ್ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆ ಸಭೆಯಲ್ಲಿ ಮಾತನಾಡಿದರು.

ಕೃಷ್ಣಾನದಿ ತೀರದ ಎಡ-ಬಲ ದಂಡೆಯ ಭಾಗದ ರೈತರು ಆಚರಿಸಲು ನಿರ್ಧರಿಸಿರುವದರಿಂದ ಉತ್ತರಪ್ರದೇಶದ ಅರ್ಚಕರ ತಂಡ ಆಗಮಿಸಿ ಕೃಷ್ಣಾರಾರತಿ ಕಾರ್ಯಕ್ರಮ ನಡೆಸಿಕೊಡಲಿದೆ ಇದು ನಿರಾಣಿ ಸಂಸ್ಥೆ ಕಾರ್ಯಕ್ರಮವಲ್ಲ, ರೈತರ ವಂತಿಕೆ ಸಂಗ್ರಹದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೃಷ್ಣಾನದಿಯ ಉಪಕಾರ ಸ್ಮರಣೆಗಾಗಿ ಪ್ರತಿವರ್ಷ ಹಿಪ್ಪರಗಿಯಲ್ಲಿ ಕೃಷ್ಣಾಷ್ಟಮಿ ದಿನದಂದು ಕೃಷ್ಣಾರಾರತಿ ಕಾರ್ಯಕ್ರಮ ನಡೆಯಲಿದೆ ಎಂದರು.

ರಾಜ್ಯದಲ್ಲಿ ಕಾವೇರಿ, ತುಂಗಭದ್ರಾ ಸಹಿತ ವಿವಿಧ ನದಿಗಳಿಗೆ ಲಭಿಸಿರುವ ಮಾನ್ಯತೆ ನಮ್ಮ ಕೃಷ್ಣಾನದಿಗೆ ಲಭಿಸಿಲ್ಲ. ನಮ್ಮ ನದಿ ಬಗ್ಗೆ ಗೌರವವಿಲ್ಲದ ಕಾರಣ ಕೃಷ್ಣೆಗೆ ಗೌರವ ನೀಡುತ್ತಿಲ್ಲ. ಮುಂದಿನ ಪೀಳಿಗೆಗೆ ನಮ್ಮ ಕೃಷ್ಣಾನದಿ ಮಹತ್ವ ತಿಳಿಸಬೇಕಾಗಿದೆ. ಪೌರಾಣಿಕ ಮತ್ತು ಇತಿಹಾಸದಲ್ಲಿಕೃಷ್ಣಾನದಿಕಲಿಯುಗದಲ್ಲಿಹುಟ್ಟಿಕೊಂಡ ನದಿಯಾಗಿದೆ. ಜನರ ಉದ್ಧಾರಕ್ಕಾಗಿ ಕೃಷ್ಣ ಪರಮಾತ್ಮ ಕಲಿಯುಗದಲ್ಲಿ ನದಿಯಾಗಿ ಹುಟ್ಟುವ ಮೂಲಕ ನಾಡಿನ ಜನರ ಕಾಮಧೇನು ಆಗಿದ್ದಾನೆ ಇತಿಹಾಸವಿದೆ. ನೆರೆ ಮಹಾರಾಷ್ಟ್ರದಲ್ಲಿ ಆರಂಭಗೊಳ್ಳುವ ಕೃಷ್ಣಾನದಿ 1460 ಕೀ.ಮಿ. ವಿಸ್ತಾರದಲ್ಲಿ ಹರಿದುವ ಆಂಧ್ರಪ್ರದೇಶ ಮೂಲಕ ಸಮುದ್ರ ಸೇರುತ್ತಿದೆ. ಕೃಷಾನದಿಗೆ ಕರ್ನಾಟಕ ಜೀವನದಿ, ಮಹಾರಾಷ್ಟ್ರದಲ್ಲಿ ತಾಯಿ ಮತ್ತು ಆಂದ್ರಪ್ರದೇಶದಲ್ಲಿ ವಿಶೇಷವಾಗಿ ಪೂಜಿಸುತ್ತಾರೆ ಎಂದರು. ಸಂಗಮೇಶ್ವರ ದೇವಸ್ಥಾನದ ಪ್ರಭುಜೀ ಬೆನ್ನಾಳೆ ಮಹಾರಾಜರು ಸಾನಿಧ್ಯ ವಹಿಸಿದ್ದರು. ಜಿ.ಪಂ. ಮಾಜಿ ಸದಸ್ಯ ಪುಂಡಲೀಕ ಫಾಲಬಾವಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಮಾಜಿ ಜಿ.ಪಂ. ಉಪಾಧ್ಯಕ್ಷ ಈಶ್ವರ ಕರಬಸನ್ನವರ, ಸೋಮನಾಥ ಪಾಟೀಲ, ಉಮೇಶ ಪಾಟೀಲ, ಭೀಮಸಿ ಮಗದುಮ್, ಶಂಕರ ಕಿತ್ತೂರ, ಪಾರೀಶ ಬಳಗಾರ, ಸಿದ್ದನಗೌಡ ಕಾಮಗೊಂಡ,ಸಂಗಪ್ಪ ಪಾಯಗೊಂಡ, ಭೀಮಸಿ ಹನಮಗೊಂಡ, ಪರಪ್ಪ ಮೂಕನ್ನವರ, ಶಿವನಗೌಡ ಪಾಟೀಲ, ಗಿರಮಲ್ಲಯ್ಯ ಗಣಾಚಾರಿ, ಸದಪ್ಪ ಬಾಗೇವಾಡಿ, ಸಿದ್ರಾಮ ಮುಧೋಳ, ಸಿದ್ದಪ್ಪ ತೇಲಿ, ಬಾಳಾಸಾಬ ಸವದತ್ತಿ, ಮಲ್ಲಪ್ಪ ಗಾಣಿಗೇರ, ಬಸವರಾಜ ದಲಾಲ, ನಿಂಗಪ್ಪ ನಾಯಕ, ಈರಪ್ಪ ಹಳಿಂಗಳಿ, ಗುರವ ಸಹಿತ ಹಲವರು ಇದ್ದರು.

## ಕಾನೂನು ಸಲಹೆಗಾರರ ನೇಮಕಾತಿಗೆ ಅರ್ಜಿ

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲಾಧಿಕಾ-ರಿಗಳ ಕಾರ್ಯಾಲಯದ ವಿವಿಧ ವಿಷಯಗಳ ಕುರಿತು ಕಾನೂನು ಸಲಹೆಗಾಗಿ ಓರ್ವ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ನಿವೃತ್ತ ಹಿರಿಯ ಸಿವಿಲ್ ನ್ಯಾಯಾಧೀಶರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ. ಇಚ್ಛೆವುಳ್ಳ ಅರ್ಹ ನ್ಯಾಯಾಧೀಶರು ಆಗಸ್ಟ 31 ರೊಳಗಾಗಿ ಜಿಲ್ಲಾಧಿಕಾರಿಗಳು ಬಾಗಲಕೋಟೆ ಕಾರ್ಯಾಲಯಕ್ಕೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುರಸಭೆಯಲ್ಲಿ ಕಾಂಗ್ರೆಸ್‌ಗೆ ಅಧಿಕಾರ: ಕಾರ್ಯಕರ್ತರ ವಿಜಯೋತ್ಸವ



**ಮಹಾಲಿಂಗಪುರ :** ಶುಕ್ರವಾರ ನಡೆದ ಪುರಸಭೆಯ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಯಲ್ಲನಗೌಡಪಾಟೀಲಅಧ್ಯಕ್ಷರಾಗಿ,ಶ್ರೀಮತಿ ಶೀಲಾ ರಾಜೇಶ ಭಾವಿಕಟ್ಟಿ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗುತ್ತಿದ್ದಂತೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ಸಂಭ್ರಮವು ಮುಗಿಲು ಮುಟ್ಟಿತ್ತು.

ಪುರಸಭೆಯ ಆವರಣದಲ್ಲಿ ನೂತನ ಅಧ್ಯಕ್ಷ-ಉಪಾಧ್ಯಕ್ಷರನ್ನು ಸನ್ಮಾನಿಸಿ ಗೌರವಿಸಿದ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ತೆರೆದ ವಾಹನದಲ್ಲಿ ನೂತನ ಅಧ್ಯಕ್ಷರನ್ನು ಪುರಸಭೆಯಿಂದ ಗಾಂಧಿ ವೃತ್ತ, ಜವಳಿ ಬಜಾರ, ನಡುಚೌಕಿ ಮಾರ್ಗವಾಗಿ ಮಹಾಲಿಂಗೇಶ್ವರ ದೇವಸ್ಥಾನದವರೆಗೆ ಮೆರವಣಿಗೆ ನಡೆಸಲಾಯಿತು.

ಕಾರ್ಯಕರ್ತರು ನೂತನ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅವರನ್ನು ಹೆಗಲಮೇಲೆ ಹೊತ್ತು ಜೈಕಾರ ಹಾಕಿದರು.

ನಂತರ ಅಧ್ಯಕ್ಷ-ಉಪಾಧ್ಯಕ್ಷರು ಮಹಾಲಿಂಗೇಶ್ವರದೇವಸ್ಥಾನಕ್ಕೆತೆರಳಿಪೂಜೆ ಸಲ್ಲಿಸಿದರು. ಕಾರ್ಯಕರ್ತರು ಜಾಂಜ್ ಪಥಕ, ವಾದ್ಯಮೇಳಗಳೊಂದಿಗೆ ಪಟಾಕಿ ಸಿಡಿಸಿ, ಗುಲಾಲ ಎರಚಿ ವಿಜಯೋತ್ಸವ ಆಚರಿಸಿದರು. ಪಕ್ಷದ ಕಾರ್ಯಕರ್ತರು ಮುಖಂಡರು ಪಟ್ಟಣದ ವಿವಿಧ ವೃತ್ತಗಳಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣುರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಪ್ಪ ಸಿಂಗಾಡಿ, ನಗರ ಘಟಕ ಅಧ್ಯಕ್ಷ ಈಶ್ವರ ಚಮಕೇರಿ, ಮುಖಂಡರಾದ ಎ.ಆರ್.ಬೆಳಗಲಿ, ಬಸವರಾಜ ರಾಯರ,ವಿಜುಗೌಡ ಪಾಟೀಲ, ಪ್ರಕಾಶ ಮಮದಾಪೂರ, ಮಹಾಲಿಂಗಪ್ಪ ತಟ್ಟಿಮನಿ, ಕೃಷ್ಣಗೌಡ ಪಾಟೀಲ, ಸಯ್ಯದ ಯಾದವಾಡ, ಮಹಾದೇವ ಮೇಟಿ, ಅಶೋಕ ಅಂಗಡಿ, ನಜೀರ ಜಾರೆ, ಆನಂದ ಬಂಡಿ, ವಿಠ್ಠಲ ಸಂಶಿ, ನಾರಾಯಣ ಜೋಷಿ, ವಿನೋದ ಸಿಂಪಿ, ಸುರೇಶ ಬಿದರಿ, ಮಹಾಲಿಂಗ ಮಾಳಿ, ವಿಠ್ಠಲ ಕುಳಲಿ, ಶ್ರೀಶೈಲ ಪಾಟೀಲ, ಮಹಾಲಿಂಗ ಪಾಟೀಲ, ಶ್ರೀನಿವಾಸ ಮಾಲಬಸರಿ, ಅಶೋಕ ಜ.ಅಂಗಡಿ, ಆನಂದ ಬುರುಡ ಸೇರಿದಂತೆ ನೂರಾರು ಕಾರ್ಯಕರ್ತರು, ಮುಖಂಡರು ವಿಜಯೋತ್ಸವದಲ್ಲಿ ಭಾಗವಹಿಸಿದ್ದರು.

## ಭಾರಿ ಬಿಗಿ ಬಂದೋಬಸ್ತ್

**2020ರ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ನಡೆದ ಗಲಾಟೆಯಿಂದಾಗಿ ಯಾವುದೇ ಅಹಿಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆಯು ಭಾರಿ ಬಿಗಿಭದ್ರತೆಯನ್ನು ಕೈಗೊಂಡಿತ್ತು. ಪುರಸಭೆಯ ಆವರಣದಲ್ಲಿ ಬ್ಯಾರಿಕೇಡ್ ಅಳವಡಿಕೆ, ಜವಳಿಬಜಾರ್ ರಸ್ತೆ, ಮಾರುತಿ ಚಿತ್ರಮಂದಿರದ ರಸ್ತೆ, ಪುರಸಭೆ ಎದುರಿನ ಚಿಮ್ಮಡ ಗಲ್ಲಿ ರಸ್ತೆ ಸೇರಿದಂತೆ ಪುರಸಭೆ ಸುತ್ತಮುತ್ತಲಿನ ಎಲ್ಲ ರಸ್ತೆಗಳಿಗೆ ಬ್ಯಾರಿಕೆಡ್ ಹಾಕಿ, ಸಿಬ್ಬಂದಿಯನ್ನು ನೇಮಕಗೊಳಿಸಿ ಬಿಗಿ ಭದ್ರತೆಯನ್ನು ಕಲ್ಪಿಸಲಾಗಿತ್ತು. 3 ಡಿಆರ್ ವಾಹನಗಳು, ಓರ್ವ ಡಿವೈಎಸ್‌ಪಿ, 3 ಸಿಪಿಆಯ್, 11 ಜನ ಪಿಎಸ್‌ಆಯ್, 11 ಜನ ಎಎಸ್‌ಆಯ್, 120 ಪೊಲೀಸ್ ಸಿಬ್ಬಂದಿಗಳನ್ನು ಭದ್ರತೆ ಒದಗಿಸಿದ್ದರು. ಪುರಸಭೆಯ ಅಕ್ಕಪಕ್ಕ ಯಾರು ಹೋಗದಂತೆ ಪೂರ್ವ ಪಶ್ಚೀಮ ಭಾಗಗಳ್ಲಿಯೂ ಬ್ಯಾರಿಕೆಡ್ ಕಟ್ಟಿ ಬಂದೋಬಸ್ತ್ ಒದಗಿಸಲಾಗಿತ್ತು.**

# ಮಹಾಲಿಂಗಪುರ ಪುರಸಭೆ ಕಾಂಗ್ರೆಸ್ ತೆಕ್ಕೆಗೆ

## ಅಧ್ಯಕ್ಷರಾಗಿ ಯಲ್ಲನಗೌಡ ಪಾಟೀಲ-ಉಪಾಧ್ಯಕ್ಷರಾಗಿ ಶೀಲಾ ಭಾವಿಕಟ್ಟಿ ಅವಿರೋಧ ಆಯ್ಕೆ

**ಮಹಾಲಿಂಗಪುರ :** ಭಾರಿ ಕುತೂಹಲ ಕೆರಳಿಸಿದ್ದ ಸ್ಥಳೀಯ ಪುರಸಭೆಯ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ನಿರೀಕ್ಷೆಯಂತೆ ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯರು, ಊರ ಗೌಡರಾದ ಯಲ್ಲನಗೌಡ ಪಾಟೀಲ್ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಶ್ರೀಮತಿ ಶೀಲಾ ರಾಜೇಶ ಭಾವಿಕಟ್ಟಿ ಅವಿರೋಧ ಆಯ್ಕೆಯಾದರು. ಈ ಮೂಲಕ ಕಾಂಗ್ರೆಸ್ ಪಕ್ಷವು 6 ವರ್ಷಗಳ ನಂತರ ಸ್ಥಳೀಯ ಸಂಸ್ಥೆಯ ಅಧಿಕಾರ ಗದ್ದುಗೆಯನ್ನು ಮತ್ತೇ ಕೈವಶ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಶುಕ್ರವಾರ ಮುಂಜಾನೆ 10 ರಿಂದ 11 ರವರಗೆ ಇದ್ದ ನಾಮಪತ್ರ ಸಲ್ಲಿಕೆ ಅವಧಿಯಲ್ಲಿ ಕಾಂಗ್ರೆಸ್ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ಯಲ್ಲನಗೌಡ ಪಾಟೀಲ್, ಉಪಾಧ್ಯಕ್ಷ ಸ್ಥಾನಕ್ಕೆ ಶೀಲಾ ರಾಜೇಶ ಭಾವಿಕಟ್ಟಿ ನಾಮಪತ್ರಗಳನ್ನು ಸಲ್ಲಿಸಿದರು. ಅಧ್ಯಕ್ಷರ ನಾಮಪತ್ರಕ್ಕೆ ಅಬ್ದುಲ್‌ರಜಾಕ್ ಬಾಗವಾನ, ಉಪಾಧ್ಯಕ್ಷರ ನಾಮಪತ್ರಕ್ಕೆ ಬಲವಂತಗೌಡ ಪಾಟೀಲ ಅವರು ಸೂಚಕರಾಗಿದ್ದರು.ಉಭಯ ಸ್ಥಾನಗಳಿಗೆ ಕಾಂಗ್ರೆಸ್ ಪಕ್ಷದಿಂದ ತಲಾ ಒಂದೊಂದೇ




ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಬಿಜೆಪಿ ಪಕ್ಷದಿಂದ ಯಾವುದೇ ನಾಮಪತ್ರಗಳ ಸಲ್ಲಿಕೆಯಾಗಲಿಲ್ಲ.

ಮಧ್ಯಾಹ್ನ 1 ಗಂಟೆಗೆ ಜರುಗಿದ ಚುನಾವಣೆಯಲ್ಲಿ ರಬಕವಿ-ಬನಹಟ್ಟಿ ತಹಶೀಲ್ದಾರರು,ಚುನಾವಣಾಧಿಕಾರಿಗಿರೀಶ ಸ್ವಾದಿಅವರುನಾಮಪತ್ರಗಳನ್ನುಪರಿಶೀಲಿಸಿ, ಉಭಯ ಸ್ಥಾನಗಳಿಗೆ ತಲಾ ಒಂದೊಂದೆ ನಾಮಪತ್ರಗಳು ಸಲ್ಲಿಕೆಯಾದ್ದರಿಂದ ಮಹಾಲಿಂಗಪುರ ಪುರಸಭೆಯ ನೂತನ ಅಧ್ಯಕ್ಷರಾಗಿ ಯಲ್ಲನಗೌಡ ಪಾಟೀಲ್, ಉಪಾಧ್ಯಕ್ಷರಾಗಿ ಶ್ರೀಮತಿ ಶೀಲಾ ರಾಜೇಶ ಭಾವಿಕಟ್ಟಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು. ಆಯ್ಕೆಯ ನಂತರ ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಚುನಾವಣಾಧಿಕಾರಿಗಳು ಹಾಗೂ ಪುರಸಭೆ ಮುಖ್ಯಾಧಿಕಾರಿಗಳು ಸನ್ಮಾನಿಸಿ ಗೌರವಿಸಿದರು.

ಬಿಜೆಪಿಯ ಬಂಡಾಯ ಸದಸ್ಯೆಯರಾದ ಗೋದಾವರಿ ಬಾಟ, ಚಾಂದನಿ ನಾಯಕ, ಸವಿತಾ ಹುರಕಡ್ಲಿ, ಪಕ್ಷೇತರ ಅಭ್ಯರ್ಥಿ ಸಜನಸಾಬ ಪೆಂಡಾರಿ, ಕಾಂಗ್ರೆಸ್ ಸದಸ್ಯರಾದ ಭಾವನಾ ಪಾಟೀಲ, ಮುಸ್ತಾಕ ಚಿಕ್ಕೋಡಿ, ಬಲವಂತಗೌಡ ಪಾಟೀಲ್, ಅಬ್ದುಲ್‌ರಜಾಕ್ ಬಾಗವಾನ, ರಾಜು ಗೌಡಪ್ಪಗೋಳ, ಬಸವರಾಜ ಬುರುಡ ಸೇರಿದಂತೆ ಕಾಂಗ್ರೆಸ್ ಪಕ್ಷದ ಒಂಭತ್ತು ಸದಸ್ಯರು ಚುನಾವಣಾ ಪ್ರಕ್ರೀಯೆಯಲ್ಲಿ ಭಾಗವಹಿಸಿದ್ದರು.

ಕಣದಿಂದ ಹಿಂದೆ ಸರಿದ ಬಿಜೆಪಿ :

ಪುರಸಭೆಯ ಪ್ರಸಕ್ತ ಅವಧಿಯ ಎರಡುವರೆ ವರ್ಷಅಧಿಕಾರ(ಇಬ್ಬರುಅಧ್ಯಕ್ಷರು)ನಡೆಸಿದ ಬಿಜೆಪಿ ಪಕ್ಷವು ಕೊನೆಯ 15 ತಿಂಗಳ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸದೇ ಕಣದಿದ್ದ ಹಿಂದೆ ಸರಿಯುತು. ಚುನಾಯಿತ 13 ಸದಸ್ಯರು(ಕಾಂಗ್ರೆಸ್ ಬೆಂಬಲಿಸಿದ 3 ಬಂಡಾಯ ಸದಸ್ಯರು) ಶಾಸಕ ಸಿದ್ದು ಸವದಿ, ಸಂಸದ ಪಿ.ಸಿ.ಗದ್ದಿಗೌಡರ ಸೇರಿದಂತೆ 15 ಮತಗಳಿದ್ದರು ಸಹ ಅಧಿಕಾರವನ್ನು ಹಿಡಿಯಲಾಗಲಿಲ್ಲ. ಇದು ಶಾಸಕ ಸಿದ್ದು ಸವದಿ ಮತ್ತು ಬಿಜೆಪಿ ಪಕ್ಷಕ್ಕೆ ಆದ ತೀವ್ರ ಹಿನ್ನಡೆಯಾಗಿದೆ.

ಕಳೆದ ಬಾರಿ ಬಿಜೆಪಿ ಬೆಂಬಲಿಸಿದ್ದ ಸಜನಸಾಬ ಪೆಂಡಾರಿ ಮತ್ತು ಬಿಜೆಪಿ ಬಂಡಾಯ ಮೂವರು ಸದಸ್ಯರು ಈ ಬಾರಿ ಕಾಂಗ್ರೆಸ್‌ಗೆ ಬೆಂಬಲಿಸಿದ್ದು, ಸದಸ್ಯರ ನಡುವಿನ ಒಗ್ಗಟ್ಟು ಮತ್ತು ಹೊಂದಾಣಿಕೆಯ ಕೊರತೆ, ಭಿನ್ನಾಭಿಪ್ರಾಯಗಳು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುವದರಿಂದ ಬಿಜೆಪಿ ಪಕ್ಷದ ಯಾವೊಬ್ಬ ಸದಸ್ಯರು ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗದ ಕಾರಣ, ಪುರಸಭೆಯ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯ ಕಣದಿಂದ ಬಿಜೆಪಿ ಹಿಂದೆ ಸರಿದಿದೆ ಎಂಬ ಮಾತುಗಳು ಕೇಳಿ ಬಂದಿವೆ.

# ಉಚಿತ ಆರೋಗ್ಯ ಹಾಗೂ ಶಸ್ತ್ರ ಚಿಕಿತ್ಸೆ ಶಿಬಿರ

**ಬನಹಟ್ಟಿ :** ಸೆಪ್ಟೆಂಬರ್ 28 ರಂದು ಎಂಆರ್‌ಎನ್ ಫೌಂಡೇಶನ್, ಜನತಾ ಶಿಕ್ಷಣ ಸಂಘ ಹಾಗು ಸಪ್ತಗಿರಿ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಹಾಗು ಶಸ್ತ್ರ ಚಿಕಿತ್ಸಾ ಶಿಬಿರವನ್ನು ಬನಹಟ್ಟಿಯ ಎಸ್.ಟಿ.ಸಿ. ಮಹಾವಿದ್ಯಾಲಯದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2-30 ಗಂಟೆವರೆಗೆ ಏರ್ಪಡಿಸಲಾಗಿದೆ ಎಂದು ಬಿಡಿಸಿಸಿ ಬ್ಯಾಂಕಿನ ಮಾಜಿ ನಿರ್ದೇಶಕ ಭೀಮಶಿ ಮಗದುಮ್ ತಿಳಿಸಿದರು.

ಬೆಂಗಳೂರಿನಿಂದ ಅನುಭವಿ ವೈದ್ಯರ ತಂಡ ಆಗಮಿಸಲಿದ್ದು , ಪ್ರಮುಖವಾಗಿ ನರರೋಗ, ಹೃದಯರೋಗ, ಮೂತ್ರ ಪಿಂಡ ಮತ್ತು ಮೂತ್ರ ಪಿಂಡದ ಕಲ್ಲು , ಕ್ಯಾನ್ಸರ್ ಸೇರಿದಂತೆ ಅನೇಕ ಚಿಕಿತ್ಸೆಗಳಿಗೆ ಉಚಿತವಾಗಿ ಚಿಕಿತ್ಸೆ, ಅವಶ್ಯಕತೆ ಇದ್ದರೆ ಶಸ್ತ್ರಕ್ರಿಯೆ ನಡೆಯಲಿದೆ ಎಂದು ತಿಳಿಸಿದರು. ಹೆಚ್ಚಿನ ಮಾಹಿತಿಗೆ 9071772722 /9071745024 ನಂಬರನ್ನು ಸಂಪರ್ಕಿಸಬಹುದು.

# ಸಾಂಕ್ರಾಮಿಕ ರೋಗಗಳ ತಡೆಗೆ, ಸಾರ್ವಜನಿಕರು ಸಹಕರಿಸಿ

**ಬಾಗಲಕೋಟೆ :** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ, ಮನ್ನಿಕಟ್ಟಿ ಗ್ರಾಮದಲ್ಲಿ "ರಾಷ್ಟ್ರೀಯ ಸಾಂಕ್ರಾಮಿಕ ರೋಗಗಳ ತಡೆಗೆ ಆರೋಗ್ಯ ಅರಿವು ಜಾಗೃತಿ" ಆಯೋಜಿಸಲಾಗಿತ್ತು. ಪ್ರಾಸ್ತಾವಿಕವಾಗಿ, ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಎಸ್ ಅಂಗಡಿಯವರು, "ಆರೋಗ್ಯದ ಸಿರಿತನಕ್ಕೆ ಮುಂಜಾಗ್ರತೆ ಅರಿವು ಇರಲಿ" ಸ್ವಚ್ಛತೆ ಶುದ್ಧತೆ ಮುಂಜಾಗ್ರತೆ ಆರೋಗ್ಯವಂತ ಕುಟುಂಬ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ.ಸೊಳ್ಳೆಗಳು ಕಚ್ಚುವಿಕೆಯಿಂದ ಮಲೇರಿಯಾ, ಆನೆಕಾಲು ರೋಗ ಮೆದುಳು ಜ್ವರ ಡೆಂಗ್ಯೂ, ಚಿಕೂನ್ ಗುನ್ಯಾ,ಝಿಕಾ ಮಾರಣಾಂತಿಕ ರೋಗಗಳ ಒಬ್ಬರಿಂದ ಒಬ್ಬರಿಗೆ ಸಾಂಕ್ರಾಮಿಕವಾಗಿ ಹರಡುವುವು. ಸೊಳ್ಳೆಗಳ ಉತ್ಪತ್ತಿ ತಾಣಗಳಾದ ತಗ್ಗು ಪ್ರದೇಶ,ಚರಂಡಿ ನೀರು ನಿಲ್ಲದಂತೆ, ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು ಒಡೆದ ಬಾಟಲ್ ಟೈರ್ ಟ್ಯೂಬ್ ಟೆಂಗಿನ ಚಿಪ್ಪು ಕಸವಿಲೇವಾರಿ ಮಾಡಬೇಕು.

ಮನೆ ಸುತ್ತ ಮುತ್ತ ಪರಿಸರ ಸ್ವಚ್ಛತೆ ಕಾಪಾಡಿಕೊಳ್ಳಬೇಕು ವೈಯಕ್ತಿಕ ಸ್ವಚ್ಛತೆ ಆದ್ಯತೆ ನೀಡಬೇಕು ಸೊಳ್ಳೆ ಪರದೆ ನಿರೋಧಕ ಬಳಸಬೇಕು ಮೈತುಂಬ ಬಟ್ಟೆ ಧರಿಸಬೇಕು ಯಾವುದೇ ತರಹ ಜ್ವರ ಕಾಣಿಸಿದರೆ ಹತ್ತಿರದ ಸರಕಾರಿ ಆಸ್ಪತ್ರೆಗೆ ಬೇಟಿ ನೀಡಿರಿ.ಪ-ರೀಕ್ಷೆ ಚಿಕಿತ್ಸೆ ಉಚಿತವಾಗಿರುತ್ತದೆ ಆರೋಗ್ಯ ಸಮಸ್ಯೆಗಳಿಗೆ 104 ಕರೆ ಮಾಡಿ ಪರಿಹಾರ ಪಡೆದುಕೊಳ್ಳಬಹುದು. ಆರೋಗ್ಯ ಅಧಿಕಾರಿಗಳು ಆಶಾ ಸ್ವಯಂ ಸೇವಕರು ತಮ್ಮ ಮನೆಗೆ ಬಂದಾಗ ಸರಿಯಾದ ಮಾಹಿತಿ ನೀಡಿ ಸಹಕರಿಸಬೇಕು ಆರೋಗ್ಯ ಇಲಾಖೆಯ ಸವಲತ್ತುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿದರು.

"ರಾಷ್ಟ್ರೀಯ ಸಾಂಕ್ರಾಮಿಕ ರೋಗಗಳ ತಡೆಗೆ ಆರೋಗ್ಯ ಅರಿವು ಜಾಗೃತಿ" ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಅಧಿಕಾ-ರಿಗಳು, ಆಶಾ ಕಾರ್ಯಕರ್ತೆಯರು,ಗ್ರಾಮದ ಮುದಿಯಪ್ಪ ಬೇನಾಳ, ಮನೋಹರ ಶಿ ಡಪಳಿ, ಬರ್ಮಪ್ಪ ಹ ಗೌಡರ, ಸಂಗಪ್ಪ ಮೈ ಹುಣಶೀಕಟ್ಟಿ, ಸಂಗಪ್ಪ ರೇ ಜುಮನಾಳ, ಮಲ್ಲಪ್ಪ ಗು ಕಾಮನಕೇರಿ ಮುಖಂಡರು ಯುವಕರು ಭಾಗವಹಿಸಿದ್ದರು.

# ತಿಂಗಳಿಂದ ಬ್ಲಾಕ್ ಆಗಿರುವ ಚರಂಡಿ

## ಹೆದ್ದಾರಿ ಮೇಲೆಲ್ಲ ಗಲೀಜು, ಸಾಂಕ್ರಾಮಿಕ ರೋಗಗಳಿಗೆ ಆಹ್ವಾನ



**ತೇರದಾಳ :** ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್ ಮುಂದಿನ (ಕೋಟೆ ಗೋಡೆ ಹತ್ತಿರ) ಚರಂಡಿ ಬ್ಲಾಕ್ ಆಗಿ ಒಂದು ತಿಂಗಳು ಗತಿಸಿದೆ. ಇದರಿಂದ ಮೂರ್‍ನಾಲ್ಕು ಭಾಗಗಳಿಂದ ಬಂದು ಸೇರುವ ಗಲೀಜು ನೀರು ಜಮಖಂಡಿ-ಕಾಗವಾಡ ರಾಜ್ಯ ಹೆದ್ದಾರಿ ಮೇಲೆ ನಿಂತು ಸಾಂಕ್ರಾಮಿಕ ರೋಗಗಳಿಗೆ ಪುರಸಭೆಯವರು ಆಹ್ವಾನ ನೀಡಿದಂತಾಗಿದೆ ಎಂದು ಪುರಸಭೆ ಸದಸ್ಯರಾದ ಶೆಟ್ಟೆಪ್ಪ ಸುಣಗಾರ ಸುರೇಶ ಕಬಾಡಗಿ, ಪಜಲ್ ಅತಾರಾವುತ್ ಪುರಸಭೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಚರಂಡಿ ಯಾವ ಸ್ಥಳದಲ್ಲಿ ಬ್ಲಾಕ್ ಆಗಿದೆ ಎಂಬುದನ್ನು ತಿಳಿಯಲು ಅಧಿಕಾರಿಗಳಿಗೆ ತಿಂಗಳುಗಳ ಸಮಯ ಬೇಕಾಗಿರುವುದು ನಿಜಕ್ಕೂ ನೋವಿನ ಸಂಗತಿ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ತೇರದಾಳ ಪಟ್ಟಣಕ್ಕೆ ಬರುವ ಬೇರೆ ಊರಿನ ಜನ ಕೂಡ ಛೀಮಾರಿ ಹಾಕುವಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇತ್ತಿಚೆಗಷ್ಟೇ ಪುರಸಭೆ ಅಧಿಕಾರಿಗಳ ಕಾರ್ಯವೈಖರಿಗೆ ಬೇಸತ್ತು ಪುರಸಭೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದ್ದೇವೆ. ಆಡಳಿತಾಧಿಕಾರಿಗಳು ಇನ್ನು ಮುಂದೆ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿ ಹೋದವರು ವಾಪಸ್ ಪತ್ತೆ ಆಗಿಲ್ಲ. ಒಂದು ತಿಂಗಳಿಂದ ಚರಂಡಿ ಗಲೀಜು ನೀರು ಹೆದ್ದಾರಿ ಮೇಲೆ ನಿಲ್ಲುತ್ತಿದೆ. ಕಾಟಾಚಾರಕ್ಕೆ ಎಂಬಂತೆ ಸಕ್ಕಿಂಗ್ ಮಶಿನ್ ಮೂಲಕ ನೀರು ಹೊರಗೆ ಹಾಕುವ ಕೆಲಸ ಮಾಡುತ್ತಾರೆ. ಆದರೆ ಚರಂಡಿ ದುರಸ್ತಿಗೊಳಿಸುವ ಕೆಲಸ ಮಾಡುತ್ತಿಲ್ಲ. ಗಲೀಜು ನೀರು ನಿಂತು ದುರ್ವಾಸನೆ ಬಡಿಯುತ್ತಿದೆ. ಸ. ಮೊದಲ ವಾರದಲ್ಲಿ ಪಟ್ಟಣದಲ್ಲಿ ಜಾತ್ರಾ ಮಹೋತ್ಸವ ಇದೆ. ಪಟ್ಟಣಕ್ಕೆ ಬರುವ ಭಕ್ತರು ಗಲೀಜು ಕಂಡು ಅಸೂಯೆ ಪಡುವ ಮೊದಲು ಚರಂಡಿ ಕೆಲಸ ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ತೇರದಾಳ ಪಟ್ಟಣದ ಸೌಂದರ್ಯ ಹಾಳು ಮಾಡಿದ ಪುರಸಭೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳ ಬಳಿ ನಿಯೋಗ ನಿರಳಿ ಮನವಿ ಸಲ್ಲಿಸಲಾಗುವುದು ಎಂದು ಶೆಟ್ಟೆಪ್ಪ ಸುಣಗಾರ, ಸುರೇಶ ಕಬಾಡಗಿ, ಆಧಿನಾಥ ಸಪ್ತಸಾಗರ, ಪೈಜುಲ್ಲಾ ಇನಾಂದಾರ, ರುಸ್ತುಂ ನಿಪ್ಪಾಣಿ, ತಿಳಿಸಿದ್ದಾರೆ.

# ಸೆ.24ಕ್ಕೆ ಕಾಡಸಿದ್ಧೇಶ್ವರ ಜಾತ್ರೆ



**ಬನಹಟ್ಟಿ :** ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ಜಾತ್ರೆಯನ್ನು ಸೆಪ್ಟಂಬರ್ 24 ರಂದು ಆಚರಿಸಲಾಗುವುದು ಎಂದು ಮಂಗಳವಾರ ಪೇಟೆ ದೈವ ಮಂಡಳಿಯ ಅಧ್ಯಕ್ಷ ಶ್ರೀಶೈಲ ಧಬಾಡಿ ತಿಳಿಸಿದರು. ಅವರು ಗುರುವಾರ ಇಲ್ಲಿನ ಕಾಡಸಿದ್ಧೇಶ್ವರ ದೇವಸ್ಥಾನದಲ್ಲಿ ಕಾಡಸಿದ್ಧೇಶ್ವರ ಜಾತ್ರೆಯ ದಿನಾಂಕ ನಿರ್ಧರಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ದಿ. 22 ರಿಂದ 26 ರವರೆಗೆ ಐದು ದಿನಗಳ ಕಾಲ ಜಾತ್ರೆಯನ್ನು ಆಚರಿಸಲಾಗುವುದು. 24 ರಂದು ಸಂಜೆ ರಥೋತ್ಸವ, ದಿ. 25 ರಂದು ಅಂತರರಾಷ್ಟ್ರೀಯ ಮಟ್ಟದ ಜಂಗೀ ನಿಕಾಲಿ ಕುಸ್ತಿಗಳು ಮತ್ತು ದಿ. 26 ರಂದು ಕಳಸೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ಧಬಾಡಿ ತಿಳಿಸಿದರು. ನಂತರ ದೇವಸ್ಥಾನದಲ್ಲಿ ಗೋವಿನ ಜೋಳದ ನುಚ್ಚು ಮತ್ತು ಅಂಬಲಿ ಪ್ರಸಾದವನ್ನು ನೀಡಲಾಯಿತು. ಶ್ರೀಪಾದ ಬಾಣಕಾರ, ರಾಜಶೇಖರ ಮಾಲಾಪುರ, ಮಲ್ಲಿಕಾರ್ಜುನ ತುಂಗಳ, ದಾನಪ್ಪ ಹುಲಜತ್ತಿ, ಎಂ. ಜಿ. ಕೆರೂರ, ಪ್ರಶಾಂತ ಕೊಳಕಿ, ಬಸವರಾಜ ಜಾಡಗೌಡ, ಕಿರಣ ಆಳಗಿ, ಮಲ್ಲಪ್ಪ ಹೂಲಿ, ಮಹಾಶಾಂತ ಶೆಟ್ಟಿ, ದೇವಸ್ಥಾನದ ಅರ್ಚಕರಾದ ಶಿವರುದ್ರಯ್ಯ ಕಾಡದೇವರ, ಶಂಕ್ರಯ್ಯ ಕಾಡದೇವರ, ನಿಜಗುಣಯ್ಯ ಕಾಡದೇವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕಾಡಸಿದ್ಧೇಶ್ವರ ವಿದ್ಯುತ್ ಚಾಲಿತ ನೇಕಾರರ ಸಂಘಕ್ಕೆ ರೂ.1 ಲಕ್ಷ 46 ಸಾವಿರ ಲಾಭ

**ಬನಹಟ್ಟಿ :** ಇಲ್ಲಿಯ ಕಾಡಸಿದ್ಧೇಶ್ವರ ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಸಹಕಾರಿ ಸಂಘಕ್ಕೆ ರೂ.1,46,520 ಲಾಭವಾಗಿದ್ದು , ಸಂಘದ ಸದಸ್ಯರಿಗೆ ರೂ. 15 ರಷ್ಟು ಲಾಭಾಂಶವನ್ನು ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಶಂಕ್ರಯ್ಯ ಕಾಡದೇವರ ತಿಳಿಸಿದರು.

ಶನಿವಾರ ಇಲ್ಲಿನ ಕಾಡಸಿದ್ಧೇಶ್ವರ ಸಮುದಾಯ ಭವನದಲ್ಲಿ ನಡೆದ ಸಂಘದ ವಾರ್ಷಿಕ ಸಭೆಯಲ್ಲಿ ಮಾತನಾಡಿದರು.

ಸಂಘದಸದಸ್ಯರುಹಾಗೂಆಡಳಿತಮಂಡಳಿಯವರು ಪ್ರಾಮಾಣಿಕವಾಗಿ ಮತ್ತು ನಿಯಮಗಳಿಗೆ ಅನುಸಾರವಾಗಿ ನಡೆದರೆ ಸಂಘವು ಉತ್ತಮ ಲಾಭವನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಕಾಡದೇವರ ತಿಳಿಸಿದರು.

ನಗರದಯುವಮುಖಂಡರಾದರಾಜೇಂದ್ರಭದ್ರನವರ ಮಾತನಾಡಿ, ಸಂಕಷ್ಟದಲ್ಲಿರುವ ಪ್ರತಿಯೊಬ್ಬರನ್ನು ಆರ್ಥಿಕವಾಗಿ ಸಬಲೀಕರಣ ಮಾಡುವುದು ಸಹಕಾರಿ ಸಂಘಗಳು ಗುರಿಯಾಗಿದೆ ಎಂದರು.

ಉದ್ದಿಮೆದಾರಮಲ್ಲಿಕಾರ್ಜುನಬಾಣಕಾರಸಭೆಯನ್ನು ಉದ್ಘಾಟಿಸಿದರು. ಉಪಾಧ್ಯಕ್ಷೆ ಮಂಜುಳಾ ಮಂಡಿ, ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಬ್ರಿಜ್ಮೋಹನ ಡಾಗಾ, ಕುಮಾರ ಕದಮ್, ಮಲ್ಲಿಕಾರ್ಜುನ ತುಂಗಳ, ಮಹಾದೇವ ಬಾಣಕಾರ, ಶಂಕರ ಕೆಸರಗೊಪ್ಪ, ಶಶಿಧರ ಬೀಳಗಿ, ಶೇಖರ ಹಕ್ಕಲದಡ್ಡಿ, ಮೋಹನ ಬೀಳಗಿ, ಅಶ್ವಿನಿ ಅಂಬಲಿ, ರವಿಚಂದ್ರ ಚನಾಳ, ಹೈದರಲಿ ಝೂರೆ, ಸಿದ್ದಪ್ಪ ದೊಡ್ಡಮನಿ, ಆನಂದ ಹಳ್ಯಾಳ ಸೇರಿದಂತೆ ಅನೇಕರು ಹಾಜರಿದ್ದರು.

# ಉತ್ತಮ ಮಳೆಯಿಂದ ತುಂಬಿ ಹರಿಯುತ್ತಿರುವ ಬಾಂದಾರಗಳು

**ರಬಕವಿ-ಬನಹಟ್ಟಿ :** ರಬಕವಿ ಬನಹಟ್ಟಿ ಹಾಗೂ ಸುತ್ತ ಮುತ್ತಲಿನ ಗ್ರಾಮೀಣ ಪ್ರದೇಶದಲ್ಲಿ ಐದಾರು ದಿನಗಳಿಂದ ಉತ್ತಮ ಮಳೆ ಸುರಿಯುತ್ತಿದ್ದು , ಘಟಪ್ರಬಾ ಎಡದಂಡೆ ಕಾಲುವೆ ಮೂಲಕ ಬನಹಟ್ಟಿಯ ಕೆರೆಗೆ ನೀರು ಬಿಟ್ಟಿರುವುದರಿಂದ ಹೆಚ್ಚುವರಿ ನೀರು ಹಳ್ಳದ ಮೂಲಕ ಕೃಷ್ಣಾ ನದಿಯನ್ನು ಸೇರುತ್ತಿದೆ.

ಕೆರೆಯಿಂದ ಅಪಾರ ಪ್ರಮಾಣದ ನೀರು ಹಳ್ಳಕ್ಕೆ ಹರಿದು ಬರುತ್ತಿರುವುದರಿಂದ ಹಳ್ಳಕ್ಕೆ ನಿರ್ಮಾಣ ಮಾಡಲಾದ ಬಾಂದಾರಗಳು ತುಂಬಿ ಹರಿಯುತ್ತಿವೆ. ಹಳ್ಳ ತುಂಬಿ ಹರಿಯುತ್ತಿದ್ದು ಮತ್ತು ಬಾಂದಾರಗಳಲ್ಲಿ ಅಪಾರ ಪ್ರಮಾಣದ ನೀರು ನಿಲ್ಲುವುದರಿಂದ ಸುತ್ತಮುತ್ತಲಿನ ತೋಟ ಮತ್ತು ಹೊಲಗಳಲ್ಲಿರುವ ಬಾವಿ ಮತ್ತು ಕೊಳವೆ ಬಾವಿಗಳ ಅಂತಜ9ಲ ಮಟ್ಟ ಹೆಚ್ಚಾಗಲಿದೆ. ಇದು ಮುಂದಿನ ದಿನಗಳಲ್ಲಿ ರೈತರಿಗೆ ಅನುಕೂಲವಾಗಲಿದೆ ಎಂದು ರೈತರಾದ ಸಿದ್ದು ಗೌಡಪ್ಪನವರ ತಿಳಿಸಿದರು.



# ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್ ಎ & ಬಿ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ

**ಬಾಗಲಕೋಟೆ ::** ಕರ್ನಾಟಕ ಲೋಕಸೇವಾ ಆಯೋಗವು ಹೊರಡಿಸಲಾದ ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ಆಗಸ್ಟ 27 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿವೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವ ಸಿದ್ದತಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದಅವರುಗೆಜೆಟೆಡ್ಪ್ರೊಬೇಷನರ್ಸ್ ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ಜಿಲ್ಲೆಯಲ್ಲಿ ನಗರದಲ್ಲಿ 23 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದ್ದು, ಒಟ್ಟು 8372 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಬಾಗಲಕೋಟೆ ನಗರದಲ್ಲಿರುವ ಸರಕಾರಿ ಮತ್ತು ಖಾಸಗಿ ಅನುದಾನಿತಶಾಲಾ–ಕಾಲೇಜುಗಳನ್ನುಪರೀಕ್ಷಾ ಕೇಂದ್ರಗಳಾಗಿ ಲೋಕಸೇವಾ ಆಯೋಗವು ಆಯ್ಕೆ ಮಾಡಿದೆ ಎಂದರು.

ನಗರದಲ್ಲಿ ಸ್ಥಾಪಿಸಲಾದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗೆಎಲ್ಲರೀತಿಯಸಿದ್ದತೆಗಳನ್ನುಕೈಗೊಳ್ಳಲು ಸೂಚಿಸಿದರು. ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಬಿ ವೃಂದದ ಅಧಿಕಾರಿಗಳನ್ನು ಸ್ಥಾನಿಕ ಜಾಗೃತ ದಳದ ಅಧಿಕಾರಿಗಳನ್ನು ನೇಮಿಸಲಾಗಿದೆ. ನಾಲ್ಕು ಪರೀಕ್ಷಾ ಉಪಕೇಂದ್ರಗಳಿಗೆ ಒಬ್ಬರಂತೆ ಎ ವೃಂದದ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸಿ ಆದೇಶಿಸಲಾಗಿದೆ. ಪರೀಕ್ಷೆ ಶಾಂತ ಹಾಗೂ ಸುಗಮವಾಗಿ ನಡೆಸಲು ಪೊಲೀಸ್ ಬಂದೋಬಸ್ತ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.



ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ, ಬಾಡಿ ಕ್ಯಾಮರಾ, ಜಾಮರ, ಫ್ರಿಸ್ಕಿಂಗ್, ಫೇಸ್ ರಿಕಾಗ್ನಾಷನ್ ಕಾರ್ಯವನ್ನು ಆಯೋಗದ ವತಿಯಿಂದ ನೇಮಿಸಲಾದ ಏಜೆನ್ಸಿಯವರು ಮಾಡಲಿದ್ದು, ಇವುಗಳು ಸಮರ್ಪಕವಾಗಿ ಕಾರ್ಯನಿರ್ವಸುತ್ತಿರುವಬಗ್ಗೆವೀಕ್ಷಕರುಪರೀಕ್ಷೆ ನಡೆಯುವಒಂದುದಿನದಮುಂಚೆಯೆಕೇಂದ್ರಕ್ಕೆ ತೆರಳಿ ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳು ಸೂಚಿಸಿದರು. ಪರೀಕ್ಷೆಯಲ್ಲಿ ಯಾವುದೇ ರೀತಿಯ ಲೋಕ ಆಗದಂತೆ ಎಲ್ಲ ರೀತಿಯ ಕ್ರಮಕೈಗೊಳ್ಳಬೇಕೆಂದರು. ಮಾರ್ಗಾಧಿಕಾರಿಗಳು ಸಮಯಕ್ಕೆ ಸರಿಯಾಗಿ ಪ್ರಶ್ನೆ ಬಂಡಲ್‌ಗಳನ್ನು ಪರೀಕ್ಷಾ ಕೇಂದ್ರಕ್ಕೆ ತಲುಪಿಸುವ ಕೆಲಸವಾಗಬೇಕು ಎಂದರು.

ಪರೀಕ್ಷೆಗಳು ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆವರೆಗೆ ಹಾಗೂ ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆವರೆಗೆ ನಡೆಯಲಿದೆ. ಪರೀಕ್ಷೆ ನಡೆಯುವ ಒಂದು ಗಂಟೆ ಮುಂಚಿತವಾಗಿಯೇ ಪರೀಕ್ಷಾ ಕೇಂದ್ರಗಳಿಗೆ ಅಭ್ಯರ್ಥಿಗಳು ಹಾಜರಾಗಬೇಕು. ಪರೀಕ್ಷಾ ಕೇಂದ್ರ 1ರಲ್ಲಿ 20 ಅಂಧ ಪರೀಕ್ಷಾರ್ಥಿಗಳು ಸಹಾಯಕರೊಂದಿಗೆ ಪರೀಕ್ಷೆಗೆ ಹಾಜರಾಗಲಿದ್ದಾರೆ. ಅವರಿಗೆ ಮುಖ್ಯ ಅಧೀಕ್ಷಕರು ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವಂತೆ ತಿಳಿಸಿದರು. ಎಲ್ಲ ಪರೀಕ್ಷಾ ಕೇಂದ್ರಗಳಿಗೆ ಅಗತ್ಯ ಅರೆವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಆರೋಗ್ಯ ಇಲಾಖೆಗೆ ಸೂಚಿಸಿದರು.

ಪರೀಕ್ಷೆ ಸುಸೂತ್ರವಾಗಿ ನಡೆಸಲು ಪರೀಕ್ಷಾ ಕೇಂದ್ರದ ಸುತ್ತಮುತ್ತಲೂ 200 ಮೀಟ–ರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ಶಾಲಾ ಶಿಕ್ಷಣ ಇಲಾಖೆಯಉಪನಿರ್ದೇಶಕಬಿ.ಕೆ.ನಂದನೂರ ಸೇರಿದಂತೆ ಆಯಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಉಪಸ್ಥಿತರಿದ್ದರು.

# ದಿ ಜ್ಯುವೆಲ್ಲರಿ ಶೋಗೆ ನಟಿ ಆರಾಧನಾ ಚಾಲನೆ

## ಬೆಂಗಳೂರು ಅರಮನೆ ಭಾನುವಾರವರೆಗೆ ನಡೆಯಲಿರುವ ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳ





**ಬೆಂಗಳೂರು :** ನಗರದ ಬೆಂಗಳೂರು ಅರಮನೆ ಆರಂಭವಾದ ಮೂರು ದಿನಗಳ ವಿನೂತನ ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳ "ದಿ ಜ್ಯುವೆಲ್ಲರಿ ಶೋ" ಅನ್ನು ನಟಿ ಮಾಲಾಶ್ರೀ ಮತ್ತು ಅವರ ಪುತ್ರಿ, ದಿ ಜ್ಯುವೆಲ್ಲರಿ ಶೋ ಬ್ರಾಂಡ್ ಅಂಬಾಸಿಡರ್ ಆಗಿರುವ ನಟಿ ಆರಾಧನಾ ಅವರು ಉದ್ಘಾಟಿಸಿದರು.

ಗೋಲ್ಡನ್ ಕ್ರೀಪರ್ ಸಂಸ್ಥೆಯ ಜಗದೀಶ ಬಿ.ಎನ್. ಮತ್ತು ಹೇಮಲತಾ ಜಗದೀಶ್ ಅವರು ಈ ಮೇಳ ಆಯೋಜಿಸಿದ್ದು, ಶುಕ್ರವಾರದಿಂದ ಮು?ರು ದಿನಗಳ ಕಾಲ (ಆ. 25ರವರೆಗೆ) ನಡೆಯಲಿದೆ. ದೇಶದ 100 ಅಗ್ರ ಶ್ರೇಣಿಯ ಆಭರಣ ತಯಾರಕರು ಇದರಲ್ಲಿ ಭಾಗವಹಿಸಿದ್ದಾರೆ.

ಮೇಳ ಉದ್ಘಾಟಿಸಿ ಮಾತನಾಡಿದ ನಟಿ ಆರಾಧನಾ, ಅತ್ಯಂತ ಪ್ರತಿಷ್ಠಿತ ಜ್ಯುವೆಲ್ಲರಿ ಶೋ ಇದಾಗಿದ್ದು, ಇಲ್ಲಿ ಚಿನ್ನ ಮತ್ತು ವಜ್ರದ ಆಭರಣಗಳ ಸಂಗ್ರಹ ತುಂಬಾ ಚೆನ್ನಾಗಿದೆ. ಮುಂಬರುವ ಮದುವೆ ಮತ್ತು ಹಬ್ಬದ ಸೀಜನ್ ಗೆ ಅಗತ್ಯವಿರುವ ಅತ್ಯುತ್ತಮ ಆಭರಣಗಳು ಇಲ್ಲಿ ಲಭ್ಯವಿವೆ. ಅಪೂರ್ವ ಮತ್ತು ಲಿಮಿಟೆಡ್ ಆಡಿಷನ್ ಆಭರಣಗಳು ಮೇಳದಲ್ಲಿ ಇದ್ದು, ರಿಯಾಯಿತಿಯೂ ಸಿಗುವುದರರಿಂದಗ್ರಾಹಕರಮನಗೆಲ್ಲುವುದು ನಿಶ್ಚಿತ ಎಂದು ಅಭಿಪ್ರಾಯಪಟ್ಟರು.

ನಟಿ ಮಾಲಾಶ್ರೀ ಮಾತನಾಡಿ, ನಾನು ಮೊದಲಿನಿಂದಲೂ ಆಭರಣ, ಅದರಲ್ಲೂ ಮುಖವಾಗಿ ವಜ್ರದ ಆಭರಣಗಳ ಪ್ರಿಯೆ. ಇಲ್ಲಿನ ವೈವಿಧ್ಯಮಯ ವಜ್ರಾಭರಣಗಳನ್ನು ನೋಡಿ ಅಚ್ಚರಿಯಾಗಿದೆ. 90ಕ್ಕೂ ಹೆಚ್ಚು ಬ್ರಾಂಡ್ ನ ಬೇರೆ ಬೇರೆ ಡಿಸೈನ್ ಗಳು ಇಲ್ಲಿ ಲಭ್ಯವಿವೆ. ಸೆಪ್ಟೆಂಬರ್ ನಿಂದ ನವೆಂಬರ್ ವರೆಗೆ ಮದುವೆ ಸೀಜನ್ ಇರುವುದರಿಂದ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಈ ಆಭರಣ ಮೇಳದ ಸದುಪಯೋಗಪಡಿಸಿಕೊಳ್ಳಬಹುದು ಎಂದು ಹೇಳಿದರು.


ಮೇಳದಲ್ಲಿ ಲಭ್ಯವಿರುವ ಚಿನ್ನದ ಆಭರಣಗಳು ಬಿಐಎಸ್ ಹಾಲ್ ಮಾರ್ಕ್ ಹೊಂದಿದ್ದು, ವಜ್ರಾಭರಣಗಳು ಅಂತಾರಾಷ್ಟ್ರೀಯ ಜಿಐಎ/ಐಜಿಐ ಟ್ಯಾಗ್ ಹೊಂದಿವೆ. ಆಭರಣ ಮಳಿಗೆಗಳ ಸದಸ್ಯರು ಆಭರಣಗಳ ವೈಶಿಷ್ಟ್ಯತೆ ಕುರಿತು ಮಾಹಿತಿ ನೀಡುತ್ತಿದ್ದಾರೆ. ಗ್ರಾಹಕರ ಅಭಿರುಚಿ ಮತ್ತು ಬಜೆಟ್ ಗೆ ಅನುಗುಣವಾಗಿ ಚಿನ್ನ ಮತ್ತು ವಜ್ರದ ಆಭರಣಗಳು ಲಭ್ಯವಿವೆ.

ಬೆಂಗಳೂರಿನ ಅನನ್ಯ ಜ್ಯುವೆಲ್ಸ್, ಅಭೂಷಣ್, ಅರ್ಜುನ ವರ, ಗಜರಾಜ್, ಎಂ.ಪಿ. ಸ್ವರ್ಣ ಮಹಲ್, ನಿಕಾರ್, ನಿರ್ಮಲ್ ಜುವೆಲ್ಸ್, ಪಂಚ ಕೇಸರಿ ಬಡೇರ, ಪಿಎಂಜೆ, ರಾಜ್ ಡೈಮಂಡ್ಸ್, ಸಿಂಹ ಜುವೆಲ್ಸ್, ಶ್ರೀ ಗಣೇಶ ಡೈಮಂಡ್ಸ್, ವರಶ್ರೀ, ಕಳಸ, ಶ್ರೀ ಕೃಷ್ಣ ಡೈಮಂಡ್ಸ್, ಬಿ.ಎನ್.ಆರ್ ಗೋಲ್ಡ್, ಧವನಂ, ಸನ್ ರೈಸ್ ಆಭರಣ್, ಸಾಗರ್ ಜುವೆಲ್, ಎಸ್.ಎಸ್, ಜುವೆಲ್ಸ್, ಸೃಷ್ಟಿ, ಅಮ್ರಪಾಲಿ, ಮಹೇಂದ್ರ ಡೈಮಂಡ್ಸ್, ಎಂ.ಆರ್.ಕೆ. ಜೀವಾ, ವಿವಾಂತ್, ಬ್ಲೋಬ್ಯೆ ಕೀರ್ತಿಲಾಲ್, ವಿನ್ಯಾಸ, ಸಂಕೇಶ್ ಸುರಾನ, ಟ್ರೈ ದಿಯಾ,

ವಂಡರ್ ಡೈಮಂಡ್ಸ್, ಕೋಹಿರಾ, ಎವಾಲ್ ಜುವೆಲ್ಸ್, ರೂಪಂ ಸಿಲ್ವರ್, ಸಿಲ್ವರ್ ಗ್ಯಾಲರಿ, ಮೈ ಸಿಲ್ವರ್, ಸ್ಯಾಂಚೀಸ್, ಕಿನಾಶೆ, ಟ್ರೈಲ್ ಔರಾ, ಮದನ್ ಜೆಮ್ಸ್, ತಾರ್ ಹ್ಯಾಂಡಿಕ್ರಾಫ್ಟ್ಸ್ ಮತ್ತಿತರ ಮಳಿಗೆಗಳು ಮೇಳದಲ್ಲಿವೆ.

ದಿ ಜ್ಯುವೆಲ್ಲರಿ ಶೋ ಉದ್ಘಾಟನಾ ಸಮಾರಂಭದಲ್ಲಿ ಸಾಮಾಜಿಕ ಉದ್ಯಮಿಗಳಾದ ಲಕ್ಷ್ಮೀ ಗೋವಿಂದರಾಜು, ಪಲ್ಲವಿ ಸಿ.ಟಿ.ರವಿ, ಫ್ಯಾಷನ್ ಡಿಸೈನರ್ ಅರ್ಪಿತಾ ರಣದೀಪ್ ಮತ್ತಿತರರು ಉಪಸ್ಥಿತರಿದ್ದರು.

# ಇಳಕಲ್ ನಗರಸಭೆಗೆ ರಾಜ್ಯಮಟ್ಟದ ಪ್ರಶಸ್ತಿ




**ಇಳಕಲ್ :** ನಗರಸಭೆ ಪಿಎಂ ಸ್ವನಿಧಿ ಯೋಜನೆಯಡಿ ಉತ್ತಮ ಅನುಷ್ಠಾನಗೊಳಿಸಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಂಚೂಣಿ ನಗರಸಭೆ ಎಂದು ಕರೆಯಲಾಗಿದೆ.ಈ ರಾಜ್ಯಮಟ್ಟದ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ದಿನಾಂಕ 22/8/2024 ರಂದು ಕರ್ನಾಟಕ ಸರ್ಕಾರದ ವೈದ್ಯಕೀಯ ಹಾಗೂ ಜೀವನೋಪಾಯ ಇಲಾಖೆಯ ಸಚಿವರಾದ ಶರಣಪ್ರಕಾಶ ಪಾಟೀಲ ಅವರು ಇಂದು ಮುಂಜಾನೆ ವಿಧಾನಸೌದ ಪಕ್ಕದಲ್ಲಿ ಇರುವ ವಿಕಾಸ ಸೌದದಲ್ಲಿ ನಡೆದಭವ್ಯಕಾರ್ಯಕ್ರಮದಲ್ಲಿಇಳಕಲ್‌ನಗರಸಭೆಯ ಪೌರಾಯುಕ್ತರಾದ ಶ್ರೀನಿವಾಸ ಜಾಧವ ,

ನಗರಸಭೆಯ ಡಿ ನಲ್ಮ ವಿಭಾಗದ ಅಧಿಕಾರಿ ಬಡೇಸಾಬ ಹುಳ್ಳಿಕೇರಿ ಅವರಿಗೆ ಸಚಿವರು ಇಲಾಖೆ ಅಧಿಕಾರಿಗಳು ಪ್ರಶಸ್ತಿ ನೀಡಿ ಗೌರವಿಸಿ ಇದೇ ರೀತಿಯೂ ಮುಂದಿನ ದಿನಗಳಲ್ಲಿಯೂ ಪ್ರಶಸ್ತಿ ಪಡೆಯುವಂತಗಾಲಿ ಎಂದು ಇಳಕಲ್ಲ ನಗರಸಭೆ ಪೌರಾಯುಕ್ತರಿಗೆ ಸಚಿವರು ನುಡಿದರು.

ಈ ಪ್ರಶಸ್ತಿ ಪಡೆದ ಸುದ್ದಿ ತಿಳಿದು ನಗರಸಭೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸುಧಾರಾಣಿ ಸಂಗಮ ಹಾಗೂ ನೂತನ ಉಪಾಧ್ಯಕ್ಷರಾದ ಕಾಳಮ್ಮ ಜಕ್ಕಾ ಅವರು ಇಳಕಲ್ ಜನತೆ ಪರವಾಗಿ ಪೌರಾಯುಕ್ತರಿಗೆ ಅಭಿನಂದನೆಯನ್ನು ತಿಳಿಸಿದ್ದಾರೆ.

ನಗರದ ಬೀದಿಬದಿ ವ್ಯಾಪಾರಸ್ಥ ಸಂಘದ ಅಧ್ಯಕ್ಷರಾದ ಪವಾಡೆಪ್ಪ ಚಲವಾದಿ ಸಂಘಟನೆ ಪರವಾಗಿ ಪೌರಾಯುಕ್ತರಿಗೆ ಹಾಗೂ ಡಿ ನಲ್ಮ ವಿಭಾಗದ ಅಧಿಕಾ–ರಿಗಳಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಹಬ್ಬಗಳನ್ನು ಶಾಂತಿತವಾಗಿ ಆಚರಿಸಿ: ಡಿವೈಎಸ್ಪಿ ಪಂಪನಗೌಡ

**ಕಲಾದಗಿ :** ಬರುವ ಗೌರಿ ಗಣೇಶ ಹಬ್ಬ ಹಾಗೂ ಈದ್ ಮಿಲಾದ್ ಹಬ್ಬವನ್ನು ಶಾಂತಿಯುತವಾಗಿ ಸಡಗರ ಸಂಭ್ರಮದೊಂದಿಗೆ ಭಕ್ತಿ ಪೂರ್ವಕವಾಗಿ ಆಚರಿಸಿ ಎಂದು ಡಿವೈಎಸ್ಪಿ ಪಂಪನಗೌಡ ಹೇಳಿದರು

ಗ್ರಾಮದ ಪೊಲೀಸ್ ಠಾಣೆಯಲ್ಲಿ ಕರೆದಿದ್ದ ಶಾಂತಿ ಪಾಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಡಿ ಜೆ ಅಂತಹ ಸೌಂಡ್ಸ್ ಗಳಿಗೆ ವಿನಾಕಾರಣ ಖರ್ಚು ಮಾಡೋಕ್ಕಿಂತಲೂ ಗ್ರಾಮೀಣ ಕಲಾವಿದರ ಬದುಕು ಕಟ್ಟಿಕೊಳ್ಳುವಂತಹ ವಾದ್ಯಗಳನ್ನು ಮೆರವಣಿಗೆ ಕಾಲಕ್ಕೆ ಬಳಸಿಕೊಳ್ಳುವುದರೊಂದಿಗೆ ಹಬ್ಬಗಳನ್ನು ಅರ್ಥಗರ್ಭಿತೀಯವಾಗಿ ಆಚರಿಸೋಣ. ಅನ್ನದಾನಕ್ಕಿಂತ ಇನ್ನೊಂದು ದಾನವಿಲ್ಲ ಆದ್ದರಿಂದ ಅನ್ನಸಂತರ್ಪನ್ನು ವಿಭಿನ್ನವಾಗಿ ಮಾಡಿಹಬ್ಬಗಳನ್ನುಸಹೋದರತ್ವದೊಂದಿಗೆ ಆಚರಿಸಿ ಎಂದರು.



ಬಾಗಲಕೋಟೆ ಗ್ರಾಮೀಣ ಸಿಪಿಐ ಎಚ್ ಆರ್ ಪಾಟೀಲ್ ಮಾತನಾಡಿ. ಎರಡು ಹಬ್ಬಗಳನ್ನುನೇಮಾಣುಸಾರವಾಗಿ ಶಾಂತಿ–ದೊಂದಿಗೆ ಆಚರಿಸಿ.

ಕಡ್ಡಾಯವಾಗಿ ಗ್ರಾಮ ಪಂಚಾಯಿತಿಯ ಹೆಸ್ಕಾಂ ಹಾಗೂ ಪೊಲೀಸ್ ಠಾಣೆಯ ಅನುಮತಿಯನ್ನು ಪಡೆದುಕೊಳ್ಳಿ. ಗಣೇಶ ಮಂಡಳಿಯವರು ಅನಧಿಕೃತ ವಿದ್ಯುತ್ತನ್ನು ಬಳಸದೇ ಅನುಮತಿ ಪಡೆದುಕೊಂಡು ವಿದ್ಯುತ್ ಬಳಸಿಕೊಳ್ಳಿ

ಮೂರು ಇಲಾಖೆ ಅನುಮತಿಯನ್ನು ಪೊಲೀಸ ಠಾಣೆಯಲ್ಲಿ ಒಂದೇ ಸ್ಥಳದಲ್ಲಿ ನೀಡಲಾಗುತ್ತದೆ. ಎಲ್ಲರೂ ಕಡ್ಡಾಯವಾಗಿ ಅನುಮತಿ ಪಡೆದುಕೊಳ್ಳಿ ಪೊಲೀಸ್ ಬಂದು ಬಸ್ತ್ ನೀಡಲು ನೀಡಲು ಸಹಕಾ–ರಿಯಾಗುತ್ತದೆ.

ವಿವಾದಿತ ಸ್ಥಳಗಳಲ್ಲಿ ಬೇರೆ ಧರ್ಮೀಯ–ರಿಗೆ ಧಕ್ಕೆ ಆಗದಂತೆ ನೋಡಿಕೊಂಡು ಮೆರವಣಿಗೆ ಮಾಡಿ. ಪಿಓಪಿ ಗಣಪತಿಯನ್ನು ಬಳಸದೇ ನೈಸರ್ಗಿಕವಾಗಿರುವ ನೈಸರ್ಗಿಕ ಸ್ನೇಹ ಗಣಪತಿಗಳನ್ನು ಬಳಸಿ ಎಂದು ಹೇಳಿದರು. ಹೆಸ್ಕಾಂ ಶಾಖಾಧಿಕಾರಿ ಜಿ ಬಿ ಛಬ್ಬಿ. ಉಪತಹಶೀಲ್ದಾರ ಆರ್ ಆರ್ ಕುಲಕರ್ಣಿ. ಗ್ರಾ ಪಂ ಕಾರ್ಯದರ್ಶಿ ಪರಸನ್ನವರ್. ಜೆ ಡಿ ಚೌಧರಿ. ಬಶೆಟ್ಟೆಪ್ಪ ಅಂಗಡಿ. ಎಚ್ ಐ ರೋಣ. ಬಂದೆ ನಮಾಜ್ ಸೌದಾಗರ. ಶ್ರೀಧರ್ ವಾಘ. ರಾಜೀಸಾಬ್ ಗೋಟ. ಮಲ್ಲಪ್ಪ ಜಮಖಂಡಿ.ರಮೇಶ ಮಾದರ . ರಾಮಣ್ಣ ತಳವಾರ. ಹನುಮಂತ ಗದ್ದನಕೇರಿ.ಸೇರಿದಂತೆಗಣೇಶಮಂಡಳಿಯ ಪ್ರಮುಖರು ಇದ್ದರು ಸ್ಥಳೀಯ ಪೊಲೀಸ್ ಠಾಣೆ ಪಿಎಸ್ಐ ಚಂದ್ರಶೇಖರ್ ಹೆರಕಲ್ ಸ್ವಾಗತಿಸಿ ವಂದಿಸಿದರು.

# ಪಪಂ ಅಧ್ಯಕ್ಷರಾಗಿ ಬೇಬಿ ಚವ್ಹಾಣ, ಉಪಾಧ್ಯಕ್ಷರಾಗಿ ಬಿಜೆಪಿ ಪಕ್ಷದ ಉಮಾಶ್ರೀ ಹಣಗಿ ಆಯ್ಕೆ



**ಅಮೀನಗಡ :** ಕರದಂಟು ಪಟ್ಟಣ ಖ್ಯಾತಿಯ ಅಮೀನಗಡ ಪಪಂ ಅಧ್ಯಕ್ಷರಾಗಿ ಬೇಬಿ ರಮೇಶ ಚವ್ಹಾಣ, ಉಪಾಧ್ಯಕ್ಷರಾಗಿ ಬಿಜೆಪಿ ಪಕ್ಷದ ಉಮಾಶ್ರೀ ಶ್ರೀನಾಥ ಹಣಗಿ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಎಸ್ಸಿ ಮೀಸಲಾತಿ ಅಡಿ ಪಪಂ ಸದಸ್ಯರು ಇದ್ದರು ಹಿನ್ನಡೆಯಾಗಿದೆ.

ತೀರ್ವ ಪೈಪೋಟಿ ನಡುವೆ ಅಮೀನಗಡ ಪಪಂ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ಹಾಗೂ ಪಕ್ಷೇತರ ಬೆಂಬಲಿತರಿಂದ ಅಭ್ಯರ್ಥಿ ಬೇಬಿ ರಮೇಶ ಚವ್ಹಾಣ ಆಯ್ಕೆ. ಎಸ್ಸಿ ವರ್ಗದ ಸದಸ್ಯರು ಬಿಜೆಪಿಯಲ್ಲಿ ಯಾರು ಕೂಡಾ ಇಲ್ಲದೆಯಿರುವದರಿಂದ ಅಧ್ಯಕ್ಷ ಸ್ಥಾನಕ್ಕೆ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆಮಾಡಿದ ಕಾಂಗ್ರೆಸ್ ಅಭ್ಯರ್ಥಿ ಬೇಬಿ ರಮೇಶ ಚವ್ಹಾಣ ಅವ–ರಿಗೆ ಬಿಜೆಪಿ ಹಾಗೂ ಪಕ್ಷೇತರರು ಸದಸ್ಯರು ಬೆಂಬಲ ನೀಡುವ ಮೂಲಕ ಪಪಂ ಅಧಿಕಾರ ತನ್ನ ಹಿಡಿತಕ್ಕೆ ಪಡೆಯಲು ಬಿಜೆಪಿ ಯಶಸ್ವಿಯಾಗಿತು.

ಒಟ್ಟು 16 ಸದಸ್ಯರ ಬಲದಲ್ಲಿ 7 ಬಿಜೆಪಿ, 4 ಕಾಂಗ್ರೆಸ್, 5 ಪಕ್ಷೇತರ ಸದಸ್ಯರಿದ್ದರು. ಬಿಜೆಪಿಯ 7 ಸದಸ್ಯರು, ಪಕ್ಷೇತರ 1 ಹಾಗೂ ಲೋಕಸಭಾ ಸಂಸದ 1, ಬಂಡಾಯ ಅಭ್ಯರ್ಥಿ ಮತ ಸೇರಿ ಒಟ್ಟು 10 ಮತ ಪಡೆದು ಬಿಜೆಪಿ ಬೆಂಬಲಿತ ಅಭ್ಯರ್ಥಿ ಗದ್ದಿಗೆ ಎರುವಲ್ಲಿ ಯಶಸ್ವಿಯಾಯಿತು. ಪಪಂ ಸಭಾಭವನದಲ್ಲಿ ನೀರಿಕ್ಷೆಯಂತೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ –3 ಪಕ್ಷೇತರ–4 ಹಾಗೂ ಶಾಸಕರ 1–ಮತ ಸೇರಿ ಒಟ್ಟು 8–ಮತಗಳನ್ನು ಪಡೆಯುವ ಜೊತೆಗೆ ಹಿನ್ನಡೆ ಸಾಧಿಸಿತು. ಕಾಂಗ್ರೆಸ್ ವಿಪ್ ಜಾರಿ ಮೀರಿದ ಕಾಂಗ್ರೆಸ್ ಸದಸ್ಯೆ ಬೇಬಿ ರಮೇಶ ಚವ್ಹಾಣ ಕಾಂಗ್ರೆಸ್ ಪಕ್ಷದ ಬಂಡಾಯವಾಗಿ ಸ್ಪರ್ಧಿಸಿದ್ದರಿಂದ ಬಿಜೆಪಿ ಹಾಗೂ ಪಕ್ಷೇತರರು ಬೆಂಬಲಿಸಿದರು. ತಾಲೂಕಾ ದಂಡಾಧಿಕಾರಿ ನಿಂಗಪ್ಪ ಬಿರಾದಾರ, ಶಿರಸ್ಥದಾರರಾದ ಎಚ್.ಎಮ್.ಶಿವಣಗಿ, ಮುಖ್ಯಾಧಿಕಾರಿ ಸುರೇಶ ಪಾಟೀಲ, ಡಿವೈ ಎಸ್‌ಪಿ, ಸಿಪಿಐ,ಪಿಎಸ್‌ಐ ಪೊಲೀಸ್ ಸಿಬ್ಬಂದಿ ಸೂಕ್ತ ಬಂದೋಬಸ್ತ ವ್ಯವಸ್ಥೆ ಕಲ್ಪಿಸಿತು. ಲೋಕಸಭಾ ಸಂಸದ ಪಿ.ಸಿ ಗದ್ದಿಗೌಡ ಮಾತನಾಡಿ, ಪಟ್ಟಣದ ಅಭಿವೃದ್ಧಿಗೆ ಪಕ್ಷೇಭೇದ ಮರೆತು ಒಗ್ಗಟ್ಟಾಗಿ ಅಭಿವೃದ್ಧಿಗೆ ಶ್ರಮಿಸಿ ಎಂದರು. ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬೇಬಿ ರಮೇಶ ಚವ್ಹಾಣ, ಉಪಾಧ್ಯಕ್ಷರಾಗಿ ಉಮಾಶ್ರೀ ಶ್ರೀನಾಥ ಹಣಗಿ ಅವರಿಗೆ ಸನ್ಮಾನಿಸಿ ಶುಭ ಕೋರಿದರು.

# ಸಹೋದರ ಸಹೋದರಿಯರ ಬಾಂಧವ್ಯ ಬೆಸೆಯುವ ರಕ್ಷಾ ಬಂಧನ

**ಬಾದಾಮಿ :** ಇಂದು ಪಟ್ಟಣದ ರಂಗನಾಥ ನಗರದಲ್ಲಿ ಜಯ ಕರ್ನಾಟಕ ರಕ್ಷಣಾ ಸೇನೆ ಜಿಲ್ಲಾಧ್ಯಕ್ಷರ ಮನೆಯಲ್ಲಿ ಸಹೋದರಿಯರು ಬೆಂಗಳೂರು, ಹರಿಹರ ಹಾಗೂ ಹಲಕುರ್ಕಿ ಸ್ಥಳಗಳಿಂದ ಗಂಡನ ಮನೆಗಳಿಂದ ತವರು ಮನೆಗೆ ಆಗಮಿಸಿ ಬಲಗೈಗೆ ಕಂಕಣ ಕಟ್ಟಿ ಹಣೆಗೆ ಸಿಂದೂರ ತಿಲಕವಿಟ್ಟು ಬೆಳ್ಳಿಯ ರಾಕಿಗಳನ್ನು ಕಟ್ಟಿ ಆರತಿ ಬೆಳಗಿ ಸಿಹಿ ತಿನ್ನಿಸಿ ರಕ್ಷಾ ಬಂಧನವನ್ನು ಕುಟುಂಬದವರೆಲ್ಲರೂ ಆಚರಿ ಸಂಭ್ರಮಿಸಿದರು



ಈ ರಕ್ಷಾ ಬಂಧನ ಹಬ್ಬವು ಸಹೋದರ ಮತ್ತು ಸಹೋದರಿಯ ನಡುವಿನ ಬಂಧವನ್ನು ಬಿಗಿಯಾಗಿಸುವ ಹಬ್ಬವಾಗಿದೆ. ಕುಟುಂಬ ಮತ್ತು ಸ್ನೇಹಿತರ ನಡುವಿನ ಪ್ರೀತಿಯನ್ನು ಹೆಚ್ಚಿಸಲು ಈ ದಿನ ಅತ್ಯಂತ ಶುಭವಾಗಿದೆ. ಪ್ರೀತಿ, ರಕ್ಷಣೆ, ಬದ್ಧತೆಯನ್ನು ಪ್ರತಿಬಿಂಬಿಸುವ ಹಬ್ಬ ಇದಾಗಿದೆ. ಸಹೋದರ ಮತ್ತು ಸಹೋದರಿಯರ ನಡುವಿನ ಪ್ರೀತಿಯನ್ನು ಹೆಚ್ಚಿಸಲು ಈ ಹಬ್ಬವನ್ನು ಆಚರಿಸಲಾಗುತ್ತದೆ. ಬಾದಾಮಿ ನಗರದ ಶಾಲೆಗಳನ್ನಿ ಮನೆ ಮನೆಗಳಲ್ಲಿ ಈ ರಕ್ಷಾ ಬಂಧನವನ್ನು ಆಚರಿಸಿದರು.

# ಪ್ರವೀಣಗೆ ಪುಟ್ಟ ಕಲಾವಿದ ಪ್ರಶಸ್ತಿ ಹಿರೇಮಠರಿಗೆ ಚಿತ್ರ ಚಕೋರ ಪ್ರಶಸ್ತಿ ಗರಿ



**ಬಾದಾಮಿ :** ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಬಾಲಭವನ ಸೊಸೈಟಿ ಬೆಂಗಳೂರು ಇವರು 2023–24ನೇ ಸಾಲಿನಲ್ಲಿ ಕೃಷಿ ಜ್ಞಾನಾಭಿವೃದ್ಧಿ ಕೇಂದ್ರ ಸಭಾ ಭವನ(ಕೃಷಿ ವಿಶ್ವವಿದ್ಯಾಲಯ) ದಲ್ಲಿ ಅ.17 ಹಾಗೂ ಅ.18 ರಂದು ಹಮ್ಮಿಕೊಂಡಿದ್ದ ಚಿನ್ನರ ಚಿತ್ರ ಚಿತ್ತಾರ ರಾಷ್ಟ್ರ ಮಟ್ಟದ ಮಕ್ಕಳ ಚಿತ್ರ ಕಲೋತ್ಸವ ಸ್ಪರ್ಧೆಯಲ್ಲಿ ತಾಲೂಕಿನ ಪಟ್ಟದಕಲ್ಲ–ಕಾಟಾಪೂರ ಗ್ರಾಮದ ಶ್ರೀ ವೀರಪುಲಿಕೇಶಿ ಪ್ರೌಢಶಾಲೆಯ 9ನೇ ವರ್ಗದ ವಿದ್ಯಾರ್ಥಿ ಪ್ರವೀಣ ಎನ್. ಕಪಲಿ ಭಾಗವಹಿಸಿ ಪ್ರಥಮ ಬಹುಮಾನದೊಂದಿಗೆ 3 ಸಾವಿರ ನಗದು ಬಹುಮಾನ ಪಡೆದು ನಮ್ಮ ಹೆಮ್ಮೆಯ ಶ್ರೀ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಗೆ, ಶಿಕ್ಷಕರಿಗೆ ಹಾಗೂ ಹೆತ್ತವರಿಗೆ ಕೀರ್ತಿ ತಂದಿದ್ದಾನೆ ಚಿತ್ರಕಲಾ ಶಿಕ್ಷಕರಾದ ಎಂ. ಎಸ್.ಹಿರೇಮಠ ಇವರು 250ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ಚಿತ್ರಕಲಾ ಸ್ಪರ್ಧೆಗೆ ಭಾಗವಹಿಸುವಲ್ಲಿ ಶ್ರಮಿಸಿದ್ದ–ರಿಂದ ಇವರಿಗೆ ಚಿತ್ರ ಚಕೋರ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ ಇವರ ಸಾಧನೆಗೆ ಸಂಸ್ಥೆಯ ಚೇರಮನ್ನರು,ಉಪಚೇರನ್ನರು,ಗೌರವ ಕಾರ್ಯದರ್ಶಿಗಳು, ಆಡಳಿತ ಮಂಡಳಿ ಸೇರಿದಂತೆ ಮುಖ್ಯೋಪಾಧ್ಯಾಯರು ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.



**ಲೋಕಾಪುರ:** ಇತ್ತಿಚೆಗೆ ಮೇಘಾಲಯ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡ ನಂತರ ಪ್ರಥಮ ಬಾರಿಗೆ ಬೆಂಗಳೂರಿಗೆ ಆಗಮಿಸಿದ ವಿಜಯ ಶಂಕರ ಅವರಿಗೆ ಲೋಕಾಪುರ ಪಟ್ಟಣದ ರಾಜ್ಯ ಸಹಕಾರ ಕುರಿ ಮಹಾಮಂಡಳ ಉಪಾಧ್ಯಕ್ಷ ಕಾಶಿನಾಥಹುಡೇದಅವರುಸನ್ಮಾನಿಸಿದರು. ಈ ಸಂದರ್ಭದಲ್ಲಿ ಗಡಿನಾಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಹಾಗೂ ಮಾಜಿ ಶಾಸಕ ಸೋಮಣ್ಣ ಬೇವಿನಮರದ, ಬೆಂಗಳೂರು ಮಹಾನಗರ ಪಾಲಿಕೆ ಮಾಜಿ ಮೇಯರ್ ವೆಂಕಟೇಶ್ ಮೂರ್ತಿ, ರಾಜ್ಯ ಕುರಿ ಮಹಾಮಂಡಳ ನಿರ್ದೇಶಕ ಎಂ ರಮೇಶ, ವಿಠ್ಠಲ ಮಳಗಲಿ, ಸಿಂಡಿಕೇಟ್ ಸದಸ್ಯ ಸಂಗಮೇಶ ವಾಲಿಕಾರ, ಚಮನ್ ಚೌಧರಿ, ಪ್ರಕಾಶ ಮುಧೋಳ, ಅಶೋಕ ಶಿರೋರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕೃಷಿಯಲ್ಲಿ ಹೊಸ ಅವಿಷ್ಕಾರಗಳ ಕುರಿತು ಪರಿಶೀಲನೆ



**ಬನಹಟ್ಟಿ :** ರಾಜ್ಯಾದ್ಯಾಂತ ಕೃಷಿಯಲ್ಲಿ ನಡೆಯುತ್ತಿರುವ ನೂತನ ಅವಿಷ್ಕಾರಗಳ ಕುರಿತು ಪರಿಶೀಲನೆ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಈ ಕುರಿತು ಕಾಫಿ ಮತ್ತು ಟೇಬಲ್ ಪುಸ್ತಕ ಪ್ರಕಟಿಸಲಾಗುವದು. ಪುಸ್ತಕದಲ್ಲಿ ನೂತನ ಬೆಳೆಗಳನ್ನು ಮತ್ತು ರೈತರನ್ನು ಪರಿಚಯಿಸಲಾಗುವುದು ಎಂದು ಜಮಖಂಡಿ ಕೃಷಿ ಅಧಿಕಾರಿ ಕೆ.ಎಸ್. ಅಗಸನಾಳ ತಿಳಸಿದರು.

ಅವರು ಶುಕ್ರವಾರ ಸಮೀಪದ ಜಗದಾಳ ಗ್ರಾಮದ ಸದಾಶಿವ ಬಂಗಿಯವರ ತೋಟಕ್ಕೆ ಭೇಟಿ ನೀಡಿ ಅವರು ಬೆಳೆದ ಬೆಳೆಗಳನ್ನು ವೀಕ್ಷಣೆ ಮಾಡಿದರು. ರಾಜ್ಯದ ವಿವಿಧೆಡೆ ಇರುವ ರೈತರನ್ನು ಮತ್ತು ಅವರು ಬೆಳೆದ ಬೆಳೆಗಳನ್ನು ರಾಜ್ಯದ ಇನ್ನಿತರ ರೈತರಿಗೂ ಪರಿಚಯಿಸುವುದರ ಜೊತೆಗೆ ಕೃಷಿಯಲ್ಲಿ ತೊಡಗಿದ ಪ್ರತಿಯೊಬ್ಬ ರೈತ ಉತ್ತಮ ಬೆಳೆಗಳನ್ನು ಬೆಳೆಯುವುದರ ಮೂಲಕ ಲಾಭ ಮಾಡಿಕೊಳ್ಳುವ ನಿಟ್ಟಿನಲ್ಲಿ ಬೆಳೆಗಳ ಕುರಿತು ಪರಿಶೀಲನೆ ಕಾರ್ಯವನ್ನು ರಾಜ್ಯದ ಕೃಷಿ ಅಧಿಕಾರಿಗಳ ನೇತೃತ್ವದಲ್ಲಿ ಕೈಗೊಳ್ಳಲಾಗಿದೆ ಎಂದು ಅಗಸನಾಳ ತಿಳಿಸಿದರು.

ಬೆಂಗಳೂರಿನ ಕೇಂದ್ರ ಕಚೇರಿಯ ಕೃಷಿ ಅಧಿಕಾರಿ ಪ್ರಕಾಶ ಎನ್, ಸ್ಥಳೀಯ ಕೃಷಿ ಅಧಿಕಾರಿಗಳಾದ ಎಸ್. ಎಂ. ಬಿರಾದಾರಪಾಟೀಲ, ಎಂ. ಎಸ್. ಭುಜರುಕ, ಟಸ್ಕಿನ್ ಡಾಂಗೆ, ಪ್ರವೀಣ ಕೊಪ್ಪದ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮದ ರೈತರು ಭಾಗವಹಿಸಿದ್ದರು.



**ಶ್ರಾವಣಮಾಸದ ಪ್ರಯುಕ್ತ ಪುರಾತನ ಕಾಲದ ಬೆಳಗಲಿಯ ಅಮೃತೇಶ್ವರನಿಗೆ ರುದ್ರಾಭಿಷೇಕ. ಚಿತ್ರದಲ್ಲಿ ವೇ ಮೂ ವಲ್ಲಭ ಕವಠೇಕರ,ಪ್ರಮೋದ ಬಾಜಿ ಅನಂತ , ವಾಸುದೇವ, ಪ್ರವೀಣ ಬಾಜಿ, ಪುಟ್ಟು ಕುಲಕರ್ಣಿ ಸೇರಿದಂತೆ ಹಲವರಿದ್ದಾರೆ.**

# ಮಹಿಳೆ ಕಾಣೆ: ಪತ್ತೆಗೆ ಸಹಕರಿಸಲು ಮನವಿ



**ಕೊಪ್ಪಳ :** ಕೊಪ್ಪಳ ತಾಲೂಕಿನ ಬೆಟಗೇರಿ ಗ್ರಾಮದ ನಿವಾಸಿ ಬಸಮ್ಮ ಗಂಡ ಸೋಮರೆಡ್ಡಿ ಗುಡದಳ್ಳಿ ಎಂಬ 52 ವರ್ಷದ ಮಹಿಳೆಯು 2024ರ ಆಗಸ್ಟ್ 12 ರ ಮಧ್ಯಾಹ್ನ 12 ಗಂಟೆಯಿಂದ ಕಾಣೆಯಾಗಿದ್ದು, ಈವರೆಗೂ ಪತ್ತೆಯಾಗಿರುವುದಿಲ್ಲ. ಈ ಬಗ್ಗೆ ಕೊಪ್ಪಳ ಮಹಿಳಾ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ: 45/2024 ಕಲಂ ಮಹಿಳಾ ಕಾಣೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

**ಕಾಣೆಯಾದ ಮಹಿಳೆಯ ಚಹರೆ :** ಮಹಿಳೆಯು 5 ಅಡಿ ಎತ್ತರವಿದ್ದು, ಸಾದಾಗೆಂಪು ಮೈ ಬಣ್ಣ ಹೊಂದಿರುತ್ತಾರೆ. ಕಾಣೆ-ಯಾದಾಗ ಹಸಿರು ಬಣ್ಣದ ಚೆಕ್ಸ್ ಸೀರೆ ಧರಿಸಿದ್ದರು.

ಮೇಲ್ಕಂಡ ಚಹರೆಯ ಮಹಿಳೆಯ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಕೊಪ್ಪಳ ಮಹಿಳಾ ಪೊಲೀಸ್ ಠಾಣೆಯ ದೂ.ಸಂ: 08539-221233, ಪಿ.ಐ ಮೊ.ಸಂ: 8861116999 ಹಾಗೂ ತನಿಖಾಧಿಕಾರಿಗಳು ನಾಗರಾಜ ಮೇಟಿ ಹೆಚ್,ಸಿ ಮೊ.ಸಂ: 9480141459, ಕಂಟ್ರೋಲ್ ರೂಂ.ಸಂ: 9480803700 ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಕೊಪ್ಪಳ ಮಹಿಳಾ ಪೊಲೀಸ್ ಠಾಣೆಯ ಪ್ರಕಟಣೆ ಕೋರಿದೆ.

# ಹೃದಯದಲ್ಲಿರುವ ಕತ್ತಲೆ ಕಳೆಯಲು ಗುರುವಿನ ಮಾತು ಅತ್ಯಾವಶ್ಯಕ: ಬಸವಾನಂದಭಾರತಿ ಮಹಾಸ್ವಾಮಿಜಿ




**ಬೀಳಗಿ :** ಗುರುವಿನ ಮಾತಿಗಿಂತ ಅಮೃತ ಬೇರೊಂದಿಲ್ಲ. ನೂರು ಜನ ಸೂರ್ಯ, ನೂರು ಜನ ಚಂದ್ರರು ಹುಟ್ಟಿದರೂ ಕೂಡ ಅವರು ಹೊರಗಿನ ಕತ್ತಲೆ ಕಳೆಯುತ್ತಾರೆ. ಒಳಗಿನ ಕತ್ತಲೆ ಕಳೆಯಲು ದೀಪ ಹಚ್ಚಲೇಬೇಕು. ಅಂದರೆ ಹೃದಯದಲ್ಲಿರುವ ಕತ್ತಲೆ ಕಳೆಯಲು ಗುರುವಿನ ಮಾತು ಅತ್ಯಾವಶ್ಯಕ ಎಂದು ಕುಳ್ಳೂರ-ಯಡಹಳ್ಳಿ ಶಿವಯೋಗೀಶ್ವರ ಕಲ್ಮಠದ ಬಸವಾನಂದಭಾರತಿ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಅರಕೇರಿ ಗ್ರಾಮದ ಶ್ರೀ ಕೌದೇಶ್ವರ ಮಠದ ನೂತನ ಮಹಾರಥೋತ್ಸವ ಹಾಗೂ ಸತ್ಸಂಗ ಸಮ್ಮೇಳನದ ಅಂಗವಾಗಿ ತೃತೀಯ ದಿನದ ಕಾರ್ಯಕ್ರಮದಲ್ಲಿ ಧರ್ಮ ಧ್ವಜಾರೋಹಣ ನೆರವೇರಿಸಿ, ಶ್ರೀಗುರು ವಚನದಿಂದಧಿಕ ಸುಧೆಯುಂಟೆ? ಎಂಬ ವಿಷಯದ ಮೇಲೆ ಜರುಗಿದ ಪ್ರವಚನ ಸಾನ್ನಿಧ್ಯ ವಹಿಸಿ ಆಶೀರ್ವನ ನೀಡಿದರು.

ಗುರುವಿನ ಮಾತು ಅಮೃತಕ್ಕೆ ಸಮಾನವಾಗಿರುತ್ತದೆ. ಗುರುವಿನ ಮಾತು ಎಂದೂ ಸುಳ್ಳಾಗದು. ಗುರುವಿನ ಮಾತು ಕೇಳಿದಾಗ ಮೋಹ ನಷ್ಟವಾಗುತ್ತದೆ. ಕಾಮುಕನಿಗೆ ಕಾಮಿಣಿಯೇ ಅಮೃತ, ಲೋಬಿಗೆ ದುಡ್ಡೇ ಅಮೃತ, ಮುಮುಕ್ಷಿಗೆ ಗುರು ವಾಕ್ಯವೇ ಅಮೃತ. ಗುರುವಿನ ಮಾತಿಗೆ ಎಂದು ಬೆಲೆ ಕಟ್ಟಲಾಗದು ಎಂದರು.

ಶ್ರೀಮಠದ ಮಾಧವಾನಂದ ಸ್ವಾಮೀಜಿ ಮಾತನಾಡಿ, ಸರಳಜೀವಿಗಳಾದ ಬಸವಾನಂದಭಾರತಿ ಸ್ವಾಮೀಜಿಗಳ ಪ್ರೇರಣೆಯ ಮೇರೆಗೆ ನಾನು ಈ ಶ್ರೀಮಠಕ್ಕೆ ಪೀಠಾಧಿಕಾರಿಯಾಗಿ ಬಂದಿರುವೆ ಎಂದು ಸ್ಮರಿಸಿಕೊಂಡ ಶ್ರೀಗಳು, 84 ಲಕ್ಷ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಶ್ರೇಷ್ಠವಾಗಿದೆ ಎಂದು ಹೇಳಿದರು.

ಪಾಪ ಸಂಸ್ಕಾರಗಳು ಗುರುವಿನ ಉಪದೇಶದಿಂದ ದೂರಾಗುತ್ತವೆ. ತಾಯಿಯ ಮತ್ತು ಗುರುವಿನ ಹೃದಯ ಪವಿತ್ರವಾಗಿರುತ್ತದೆ. ಬೇರೆ ಬೇರೆ ಊರಿನಲ್ಲಿರುವ ಕೌದೇಶ್ವರ ಮಠದಲ್ಲಿ ಕೌದೇಶ್ವರರ ಮೂರ್ತಿ ಇರಲಿಲ್ಲ. ಹೀಗಾಗಿ ಕೌದೇಶ್ವರ ಮಹಾರಾಜರ ಮೂರ್ತಿ ಸ್ಥಾಪಿಸಿದ್ದೇವೆಂದು ಹೇಳಿದರು.

**ದಿ. 25 ರಂದು ಮುಂಜಾನೆ 9:30 ಗಂಟೆಗೆ 'ಭಕ್ತಿ ಭಾವಾನುಕೂಲನೆ ಶಂಭೋಲಿಂಗ' ಹಾಗೂ ಸಂಜೆ 7:30 ಗಂಟೆಗೆ 'ತ್ರಿಜಗತಿ ಸಜ್ಜನ ಸಂಗತಿ ರೇಖಾ' ವಿಷಯದ ಮೇಲೆ ವಿವಿಧ ಪೂಜ್ಯರಿಂದ ಪ್ರವಚನ ನಡೆಯುವುದು.**

ಅನವಾಲ ಶ್ರದ್ಧಾನಂದ ಆಶ್ರಮದ ಡಾ. ಕೈಲಾಸಪತಿ ಸ್ವಾಮೀಜಿ ಮಾತನಾಡಿ, ಶಿಕ್ಷಣಕ್ಕಿಂತ ಸಂಸ್ಕಾರ ಮುಖ್ಯ. ಕಾವಿ ಹಾಕಿದವರಲ್ಲ ಸಾಧುಗಳಲ್ಲ. ಸಾಲ, ರೋಗ, ದ್ವೇಷ ಇಲ್ಲದವನೇ ಬಹುದೊಡ್ಡ ಶ್ರೀಮಂತ. ಪ್ರಪಂಚ ನಂಬಿದವನು ಕೆಡಬಹುದು. ಆದರೆ ಗುರುವಿನ ನಂಬಿದವನು ಕೆಡಲು ಸಾಧ್ಯವಿಲ್ಲ ಎಂದರು.

ತಾವರಗೇರಿ ಸಿದ್ಧಾರೂಢ ಮಠದ ನಿರ್ಗುಣಾನಂದ ಸ್ವಾಮೀಜಿ ಮಾತನಾಡಿ, ಗುರು ಅಂದರೆ ಚೇತನ. ಸದ್ಗುರಿವಿನ ವಚನವೇ ಅಮೃತ. ಗುರುವಿನಲ್ಲಿ ಶಿಷ್ಯನಿಗೆ ವಿಶ್ವಾಸ ಇರಬೇಕು ಎಂದು ಹೇಳಿದರು.

ವಿಶ್ರಾಂತ ಶಿಕ್ಷಕ ರವಿ ಚಂಡಕಿ, ಅನವಾಲದ ಈಶ್ವರಾನಂದ ಶರಣರು ಮಾತನಾಡಿದರು. ಹುಬ್ಬಳ್ಳಿ ಧರ್ಮಶ್ರೀಯ ಯಶವಂತಾನಂದ ಮಹಾರಾಜರು, ಹುಬ್ಬಳ್ಳಿಯ ಮಹಾಂತೇಶ ಸ್ವಾಮೀಜಿ ವೇದಿಕೆ ಮೇಲಿದ್ದರು.

# ಬಾಲಕಿಯರ ವಾಲಿಬಾಲ್ ತಂಡ ತಾಲೂಕಮಟ್ಟಕ್ಕೆ ಆಯ್ಕೆ



**ಜಮಖಂಡಿ :** ಕುಂಚನೂರು ವಲಯಮಟ್ಟದ ಪ್ರೌಢಶಾಲೆಗಳ 17ರ ವಯೋಮಾನದೊಳಗಿನ ಕ್ರೀಡಾಕೂಟದಲ್ಲಿ ಕುಂಬಾರಹಳ್ಳ ಸರಕಾರಿ ಪ್ರೌಢಶಾಲೆ ಬಾಲಕಿಯರ ತಂಡ ಪ್ರಥಮಸ್ಥಾನ ಪಡೆದು ತಾಲೂಕಮಟ್ಟಕ್ಕೆ ಆಯ್ಕೆಗೊಂಡಿದೆ. ತ್ರೋಬಾಲ ಕ್ರೀಡೆಯಲ್ಲಿ ಬಾಲಕಿಯರ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ವಿದ್ಯಾರ್ಥಿಗಳ ಸಾಧನೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕಬಸಣ್ಣವರ,ಮುಖ್ಯಶಿಕ್ಷಕನಾರಾಯಣ ಶಾಸ್ತ್ರಿ, ದೈಹಿಕ ಶಿಕ್ಷಣ ಶಿಕ್ಷಕ ಬಾಹುಬಲಿ ಮುತ್ತೂರ, ತಂಡದ ವ್ಯವಸ್ಥಾಪಕ ಸಂಗಮೇಶ ಉಟಗಿ, ಶಿಕ್ಷಕರಾದ ಸಂಜೀವ ಝಂಬೂರೆ, ಚಂದ್ರಕಾಂತ ಪೊಲೀಸ, ಶಾರದಾ ಮಠ, ಸವಿತಾ ಬೆನಕಟ್ಟಿ, ಆಶಿಫಾಭಾನು ಮೋಮಿನ, ಶಕುಂತಲಾ ಬಿರಾದಾರ ಸಹಿತ ವಿವಿಧ ಸಂಘ-ಸಂಸ್ಥೆಗಳು, ಗ್ರಾಮಸ್ಥರು ಅಭಿನಂದಿಸಿದ್ದಾರೆ.

# ಕಮೀಶನ್ ಹಣ ಬಿಡುಗಡೆಗೆ ಆಗ್ರಹ



**ರಬಕವಿ-ಬನಹಟ್ಟಿ :** ಸರ್ಕಾರ ನ್ಯಾಯ ಬೆಲೆ ಅಂಗಡಿಯವರಿಗೆ ಕಳೆದ ಏಳು ತಿಂಗಳುಗಳಿಂದ ಕಮೀಶನ್ ಹಣವನ್ನು ಬಿಡುಗಡೆ ಮಾಡಿಲ್ಲ. ಹಿಂದಿನ ಐದು ವರ್ಷಗಳಿಂದ ಇ- ಕೆವೈಸಿ ಹಣವನ್ನು ಕೂಡಾ ಬಿಡುಗಡೆ ಮಾಡಿಲ್ಲ. ಇದರಿಂದ ನ್ಯಾಯಬೆಲೆ ಅಂಗಡಿಯವರಿಗೆ ಅತೀವ ತೊಂದರೆಯಾಗಿದೆ. ಈಗಾಗಲೇ ಈ ಕುರಿತು ಎರಡು ತಿಂಗಳ ಹಿಂದೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ರಬಕವಿ ಬನಹಟ್ಟಿ ತಾಲ್ಲೂಕು ನ್ಯಾಯಬೆಲೆ ಅಂಗಡಿಕಾರರ ಸಂಘದ ಅಧ್ಯಕ್ಷ ಗಜಾನನ ನಾಗರಾಳ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದ ಗ್ರೇಡ್-2 ತಹಶೀಲ್ದಾರ್ ಎಸ್. ಬಿ. ಕಾಂಬಳೆಯವರಿಗೆ ಕಮೀಶನ್ ಹಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಮನವಿ ಸಲ್ಲಿಸಿ ಮಾತನಾಡಿದರು.

ಸರ್ಕಾರ ಆದಷ್ಟು ಬೇಗನೆ ನಮ್ಮ ಮನವಿಗೆ ಸ್ಪಂದಿಸಿ ಕಮೀಶನ್ ಮತ್ತು ಇ-ಕೆವೈಸಿ ಹಣವನ್ನು ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಸಪ್ಟೆಂಬರ್ ತಿಂಗಳ ಪಡಿತರ ಧಾನ್ಯಗಳನ್ನು ವಿತರಣೆ ಮಾಡದಿರಲು ನಿಶ್ಚಯಿಸಲಾಗಿದೆ. ಹಣ ಬಿಡುಗಡೆಯಾಗದೆ ಇರುವುದರಿಂದ ನಮಗೆ ಬಹಳಷ್ಟು ತೊಂದರೆಯಾಗಿದೆ. ಮುಂದಿನ ದಿನಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗುವ ದಿಶೆಯಲ್ಲಿ ಹಣವನ್ನು ಬಿಡುಗಡೆ ಮಾಡಬೇಕು ಎಂದು ನಾಗರಾಳ ತಿಳಿಸಿದರು.

ಈ ಸಂದರ್ಭದಲ್ಲಿ ಪಡಿತರ ಅಂಗಡಿಕಾರರಾದ ಹಣಮಂತ ಕುಂದಗೋಳ, ಕಿರಣ ಗಿರಿಸಾಗರ, ರವೀಂದ್ರ ಗುಂಡಿ, ಅಜೀಜ್ ಮಹೀಷವಾಡಗಿ, ಮಹಾದೇವ ಕಡಬಲ್ಲನವರ, ಅಶೋಕ ಪವಾರ, ಸಂಗಪ್ಪ ಮಾದರ, ಶಂಕರ ಆಸಂಗಿ, ಸಂಜಯ ಮಾಲಾಪುರ, ರಾಮು ತಿಮ್ಮಾಪುರ, ತುಳಜಪ್ಪ , ಕಾಡಯ್ಯ ಹಿರೇಮಠ ಮತ್ತು ಶೇಖರ ಸಜ್ಜನವರ ಮುಂತಾದವರು ಭಾಗವಹಿಸಿದ್ದರು.

# ಜ್ಞಾನ ಕಳೆದು ಹೋಗದ ಸಂಪತ್ತು: ಡಾ. ವಿಶ್ವಪ್ರಭುದೇವ ಶಿವಾಚಾರ್ಯ ಸ್ವಾಮೀಜಿ






**ಬಾಗಲಕೋಟೆ :** ನಿರಂತರವಾಗಿ ಅಧ್ಯಯನ ಹಾಗೂ ಪಠ್ಯೇತರ ಕಾರ್ಯ ಚಟುವಟಿಕೆಗಳಲ್ಲಿ ಮನಸಾ ಪೂರಕವಾಗಿ ತೊಡಗಿಸಿಕೊಂಡಾಗ ಮಾತ್ರ ಭವಿಷ್ಯವನ್ನು ಉಜ್ವಲ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಬೀಳ್ಕೊಡುಗೆ ಅಂದರೆ ಉನ್ನತ ಶಿಕ್ಷಣಕ್ಕೆ ಹೋಗುವುದು ಹೊರತು ಶಿಕ್ಷಕರು ವಿದ್ಯಾರ್ಥಿಗಳನ್ನು ಬಿಟ್ಟುಕೊಡುವುದಲ್ಲ. ಎಂದು ಕೊಣ್ಣೂರಿನ ಹೊರಗಿನಮಠದ ಡಾ. ವಿಶ್ವಪ್ರಭುದೇವ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಬಿವ್ಹಿವ್ಹಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರತಿಭಾ ಪುರಸ್ಕಾರ ಹಾಗೂ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೋಡಗೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು. ಪದವಿ ಬದುಕಿನಲ್ಲಿ ಬದಲಾವಣೆ ತರುತ್ತದೆ. ಪ್ರತಿಯೊಂದು ವಿಷಯದ ಜ್ಞಾನವು ಬದುಕಿಗೆ ತಳಪಾಯವಿದ್ದಂತೆ. ಶಿಕ್ಷಣದಲ್ಲಿ ಮೌಲ್ಯಯುತ ಶಿಕ್ಷಣವನ್ನು ಕಲಿಯಬೇಕು. ಯುವಜನತೆ ಉತ್ತಮ ಮಾರ್ಗದಲ್ಲಿ ನಡೆಯುವ ಮೂಲಕ ಉತ್ತಮವಾದದ್ದನ್ನು ಪಡೆದುಕೊಳ್ಳಲು ಸಾಧ್ಯ. ನಿರ್ಧಿಷ್ಟ ಗುರಿ ಸಾಧನೆಯತ್ತ ಗಮನ ಹರಿಸಬೇಕು. ಹಸಿವಾದವರಿಗೆ ಅಣ್ಣ ನೀಡಿದರೆ ಶ್ರೇಷ್ಠಧಾನ ಎನ್ನುತ್ತಾರೆ ಆದರೆ ವಿದ್ಯಾ ಧಾನವು ಪರಮಶ್ರೇಷ್ಠ ಧಾನವಾಗಿದ್ದು ಜೀವನ ಪಾಠ ಹೇಳಿದ ಶಿಕ್ಷಕರಿಗೆ ವಿಧೆಯರಾಗಿರಬೇಕು ಎಂದರು. ಪ್ರತಿಯೊಬ್ಬರ ಪ್ರೌಢಾವಸ್ಥೆಯಲ್ಲಿ ಗುರುಗಳ ಪಾತ್ರ ದೊಡ್ಡದು. ನಿರಂತರವಾಗಿ ಓದಿನಲ್ಲಿ ತೊಡಗಿಕೊಳ್ಳಿ ಜ್ಞಾನ ಕಳೆದು ಹೋಗದು ಸಂಪತ್ತು ಅದನ್ನು ಬಳಸಿದಷ್ಟು ಹೆಚ್ಚುತ್ತ ಹೋಗುತ್ತದೆ. ವಿದ್ಯೆ ಮತ್ತು ಬುದ್ಧಿವಂತಿಕೆ ಎರಡು ವಿಭಿನ್ನವಾದವುಗಳು ಬುದ್ಧಿಯನ್ನು ಹೆಚ್ಚಿಸಿಕೊಂಡಷ್ಟು ವ್ಯಕ್ತಿತ್ವದ ಬೆಳವಣಿಗೆಯಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಪ್ರಾಚಾರ್ಯರಾದ ಎಸ್.ಆರ್. ಮೂಗನೂರಮಠ ಅವರು ಮಾತನಾಡಿ ಯಾವುದೇ ಬೇದಭಾವವಿಲ್ಲದೆ ಬಸವಣ್ಣನವರ ಏಳು ತತ್ವಗಳನ್ನು ಅಳವಡಿಸಿಕೊಂಡು ವಿದ್ಯಾಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರವುದು ಬಸವೇಶ್ವರ ಸಂಘ ಎನ್ನುವುದು ಒಂದು ಹೆಮ್ಮೆಯ ವಿಷಯ. ವಿದ್ಯೆಗಾಗಿ ಮಾಡಿದ ಪರಿಶ್ರಮ ಎಂದಿಗೂ ವ್ಯರ್ಥವಾಗಲು ಸಾಧ್ಯವಿಲ್ಲ ಅದು ಎಂದಾದರೂ ಒಮ್ಮೆ ಫಲ ನೀಡುತ್ತದೆ. ಸರ್ಟಿಫಿಕೇಟ್ ಕೋರ್ಸಗಳು ವಿದ್ಯಾರ್ಥಿಗಳ ಜ್ಞಾನದ ಹರಿವನ್ನು ಹೆಚ್ಚಿಸಿದ್ದು. ಜ್ಞಾನವು ವಿದ್ಯಾರ್ಥಿಗಳ ಒಡವೆ ಇದ್ದಂತೆ ಅದನ್ನು ಸಮರ್ಪಕವಾಗಿ ಪಡೆದುಕೊಂಡಿದ್ದೀರಿ ಅದನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ. ವಿದ್ಯಾರ್ಥಿ ದೆಸೆಯಲ್ಲಿಯೇ ಕಾಲೇಜಿಗೆ ಕೀರ್ತಿ ತರುವ ವಿಧ್ಯಾರ್ಥಿಗಳಾದರೆ ಗುರುವೃಂದಕ್ಕೆ ಸಂತೋಷ ಎಂದರು.

ಇದೇ ವೇಳೆ ಕಲಾ ದೀಪ್ತಿ ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಲಾಯಿತು. ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ವಿವಿ ಮಟ್ಟದಲ್ಲಿ ಬ್ಲ್ಯೂ ಆಗಿ ಹೊರಹೊಮ್ಮಿದ ಕ್ರೀಡಾಪಟುಗಳಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಯೋಜಕರಾದ ಡಾ. ಎ. ಯು ರಾಠೋಡ, ಪ್ರಾಧ್ಯಾಪಕರುಗಳಾದ ಡಾ. ಕೆ.ವಿ ಮಠ, ಸುರೇಶ. ಆರ್, ಎಮ್. ಎಮ್ ದೇವನಾಳ, ವಿದ್ಯಾರ್ಥಿ ಪ್ರತಿನಿಧಿಗಳಾದ ಸಚೀನ ಪೂಜಾರಿ, ನೇತ್ರಾ ರಾಂಪೂರ ಸೇರಿದಂತೆ ವಿವಿಧ ವಿಭಾಗಗಳ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು.

# ಭಜನಾ ಕಲಾವಿದರನ್ನು ಪ್ರೋತ್ಸಾಹಿಸಿ



**ಬನಹಟ್ಟಿ :** ಆಧುನಿಕತೆ ಭರಾಟೆಯ ಇಂದಿನ ದಿನಗಳಲ್ಲಿ ನಮ್ಮ ದೇಸಿ ಸಂಸ್ಕೃತಿಯನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಇತ್ತೀಚೆಗೆ ಭಜನಾ ಪದಗಳನ್ನು ಕೇಳುವವರ ಸಂಖ್ಯೆ ಕೂಡಾ ಕಡಿಮೆಯಾಗುತ್ತಿದೆ. ಆದ್ದರಿಂದ ಭಜನಾ ಪದಗಳ ಕಲೆ ಮತ್ತು ಕಲಾವಿದರನ್ನು ಪ್ರೋತ್ಸಾಹಿಸುವುದು ಅಗತ್ಯವಾಗಿದೆ ಎಂದು ಇಲ್ಲಿನ ಕುರುಹಿನಶೆಟ್ಟಿ ಸಮಾಜದ ಮುಖಂಡ ಕಾಡು ಕಲಬುರ್ಗಿ ತಿಳಿಸಿದರು.

ಅವರು ಗುರುವಾರ ರಾತ್ರಿ ಇಲ್ಲಿನ ನೀಲಕಂಠೇಶ್ವರ ಮಠದಲ್ಲಿ ಜಗದ್ಗುರು ಶಂಕರ ಶಿವಾಚಾರ್ಯರ 18 ನೇ ಪುಣ್ಯಾರಾಧನೆ ಅಂಗವಾಗಿ ಹಮ್ಮಿಕೊಳ್ಳಲಾದ ಭಜನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ನಾವಲಗಿಯ ಹಿರಿಯ ಕಲಾವಿದ ಮಲ್ಲಪ್ಪ ಗಣಿ ನೇತೃತ್ವದಲ್ಲಿ ಭಜನಾ ಕಲಾವಿದರಾದ ಚಂದ್ರವ್ವ ನಾಯಕ, ಯಲ್ಲವ್ವ ನಾಯಕ, ಬಸಪ್ಪ ಪಟ್ಟಣಶೆಟ್ಟಿ ಭಜನಾ ಪದಗಳನ್ನು ಹಾಡಿದರು. ಹನಮಂತ ನೇಸೂರ ಹಾರ್ಮೋನಿಯಂ, ಮಹಾದೇವ ಹಳ್ಳಿ ತಾಳ ಮತ್ತು ಸಿದ್ದಪ್ಪ ಕಂಚು ದಮಡಿ ಸಾಥ್ ನೀಡಿದರು. ಈ ಸಂದರ್ಭದಲ್ಲಿ ಭಜನಾ ಪದಗಳು, ಭಕ್ತಿ ಗೀತೆಗಳು, ತತ್ವ ಪದಗಳು, ಶರಣರ ವಚನಗಳು ಸೇರಿದಂತೆ ಅನೇಕ ಪದಗಳನ್ನು ಹಾಡಿ ಸೇರಿದ ಜನರನ್ನು ರಂಜಿಸಿದರು.

ಮಹಾದೇವ ಗಿಡದಾನಪ್ಪಗೋಳ, ಪ್ರಕಾಶ ಆಸಂಗಿ, ಸಂಗಪ್ಪ ನಂದ್ಯಾಳ, ಕಾಡಪ್ಪ ಬಬಲಾದಿ, ಶಂಕರ ಹಿಪ್ಪರಗಿ, ದಾನಪ್ಪ ಚಿಂಚಖಂಡಿ, ಚನಮಲ್ಲಪ್ಪ ಸಣಪೇಟೆ, ಶ್ರೀಶೈಲ ಶಿರಗೂರ ಉಪಸ್ಥಿತರಿದ್ದರು.

# ತಾಯಿಯ ಹೆಸರಿನಲ್ಲಿ ಒಂದು ಮರ ಬೆಳಸಿ ಪೋಷಣೆ ಮಾಡಿ-ಚನ್ನವೀರಪ್ಪ

**ಕವಿತಾಳ :** ನಮಗೆ ಜನ್ಮ ಕೊಟ್ಟ ತಾಯಿಗೆ ನಾವು ಏನೂ ಕೊಟ್ಟರೂ ಆಕೆಯ ಋಣ ತೀರಿಸಲು ಸಾಧ್ಯವಿಲ್ಲ. ನಮ್ಮ ಸುತ್ತಲಿನ ಪರಿಸರದಲ್ಲಿ ನೀರು, ಗಾಳಿ, ಬೆಳಕು, ಆಹಾರ ದೊರೆಯುತ್ತದೆ.ಪ್ರಕೃತಿ ಮತ್ತು ಅಮ್ಮನ ಋಣವನ್ನು ಎಂದಿಗೂ ತೀರಿಸಲು ಆಗುವುದಿಲ್ಲ, ಅದಕ್ಕಾಗಿ ಜನ್ಮ ಕೊಟ್ಟ ತಾಯಿಯ ಹೆಸರಿನಲ್ಲಿ ಒಂದು ಮರ

ಬೆಳಸಿ ಅದನ್ನು ಪೋಷಣೆ ಮಾಡಬೇಕೆಂದು ಸಿರವಾರ ತಾಲೂಕ ಪಂಚಾಯತಿ ಯೋಜನಾಧಿಕಾರಿ ಚೆನ್ನವೀರಪ್ಪ ಹೇಳಿದರು.

ಸಾಮಾಜಿಕ ಅರಣ್ಯ ಇಲಾಖೆ ಮಾನ್ವಿ, ಸಿರವಾರ ಮತ್ತು ತಾಲೂಕ ಪಂಚಾಯತಿ ಸಿರವಾರ ಹಾಗೂ ಗ್ರಾಪಂ.ಬಾಗಲವಾಡ ಇವರ ಸಹಯೋಗದಲ್ಲಿ ಶುಕ್ರವಾರ ಏರ್ಪಡಿಸಿದ್ದ ತಾಯಿಯ ಹೆಸರಿನಲ್ಲಿ ಒಂದು ವೃಕ್ಷ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ದೇಶದ ಅಭಿವೃದ್ಧಿಗಾಗಿ ಪ್ರಕೃತಿ ಪ್ರಧಾನ ಸಂಪತ್ತುಯಾಗಿದೆ. ಪ್ರತಿಯೊಬ್ಬರೂ ನಿಮ್ಮ ಮನೆಯ ಮುಂದೆ ತಾಯಿಯ ಹೆಸರಿನಲ್ಲಿ ಒಂದು ಗಿಡ ಮರ ಬೆಳಸಿ ಪೋಷಣೆ ಮಾಡಬೇಕು.ಪರಿಸರದ ಮೇಲೆ ಅತಿಯಾದ ದಬ್ಬಾಳಿಕೆಯಿಂದ ಪ್ರಕೃತಿ ನಾಶವಾಗುತ್ತಿದೆ.ಹೀಗಾಗಿ ಪ್ರಕೃತಿಯಲ್ಲಿ ವಿವಿಧ ರೀತಿಯ ಪ್ರಕೃತಿ ವಿಕೋಪಗಳು ನಡೆಯುತ್ತಿವೆ.ಪ್ರಕೃತಿಯನ್ನು ಸಂರಕ್ಷಣೆ ಮಾಡಿದರೆ ಮಾತ್ರ ಉತ್ತಮವಾದ ಮಳೆ, ಬೆಳೆ ಬರಲು ಸಾಧ್ಯವಾಗಿದೆ. ಪ್ರತಿಯೊಬ್ಬರೂ ಪರಿಸರ ಬೆಳಸಿ ಸಂರಕ್ಷಣೆ ಮಾಡಲು ಮುಂದಾಗಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಬಾಗಲವಾಡ ಗ್ರಾಪಂ. ಅಧ್ಯಕ್ಷ ತಿಪ್ಪಣ್ಣ ವಕೀಲ, ತಾಲೂಕ ವಸತಿ ನೋಡಲ್ ಅಧಿಕಾರಿ ಗೋಪಾಲ್ ಬಡಿಗೇರ್, ಐ ಇ ಸಿ ಸಂಯೋಜಕ ರಾಜೇಂದ್ರಕುಮಾರ, ವಲಯ ಅರಣ್ಯಾಧಿಕಾರಿ ರಮೇಶ ಬಡಿಗೇರ್, ಗ್ರಾಪಂ. ಪಿ ಡಿ ಓ ದೇವೇಂದ್ರಪ್ಪ, ಕಾರ್ಯದರ್ಶಿ ಈಕಪ್ಪಪವಾರ, ಹಾಗೂ ಗ್ರಾಪಂ. ಸದಸ್ಯರು ಸೇರಿದಂತೆ ಇತರಿದ್ದರು.

## ಯೂರೋಪ್ ಟೈಲರ ಹಾಜಿ ಮೌಲಾಹುಸೇನ್ ಹುರಕಡ್ಲಿ ನಿಧನ-ಅಂತ್ಯಕ್ರಿಯೆ

**ಕೊಪ್ಪಳ :** ಮುಸ್ಲಿಂ ಸಮಾಜದ ಹಿರಿಯ ಮುಖಂಡ ಹಾಜಿ ಮೌಲಾ ಹುಸೇನ್ ಹುರಕಡ್ಲಿ 82, ವಯಸ್ಸು, ಯೂರೋಪ್ ಟೈಲರ್ , ರವರು ಮಂಗಳವಾರ ಬೆಳಿಗ್ಗೆ ನಿಧನ ಹೊಂದಿದ್ದಾರೆ, ಮೃತ್ತರು ತನ್ನ ಹಿಂದೆ ಹೆಂಡತಿ ಮೂರು ಜನ ಗಂಡು ಮಕ್ಕಳು ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳು ಸೇರಿದಂತೆ ಅಳಿಯಂದರು, ಸೊಸೆಯಂದರು , ಮೊಮ್ಮಕ್ಕಳು ಮರಿ ಮೊಮ್ಮಕ್ಕಳು ಅಲ್ಲದೆ ಅಪಾರ ಬಂಧು ಬಳಗ ಅಗಲಿದ್ದಾರೆ, ಸುದ್ದಿ ತಿಳಿದ ತಕ್ಷಣ ಮಾಜಿ ಸಂಸದ ಸಂಗಣ್ಣ ಕರಡಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಸಮಾಜದ ಹಿರಿಯ ಮುಖಂಡ ಸೈಯದ್ ಜುಲ್ ಖಾದರ್ ಖಾದ್ರಿ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್ ಸೇರಿದಂತೆ ಹಲವು ಜನ ಗಣ್ಯರು ರಾಜಕಾರಣಿಗಳು ಸಮಾಜ ಸೇವಕರು ಸಮಾಜ ಬಾಂಧವರು ಭೇಟಿ ಮಾಡಿ ಸಾಂತ್ವನ ಹೇಳಿ ಮೃತರ ಆತ್ಮಕ್ಕೆ ಆ ಸೃಷ್ಟಿಕರ್ತ ಶಾಂತಿ ದಯಪಾಲಿಸಲೆಂದು ಪ್ರಾರ್ಥಿಸಿ ಅವರ ಕುಟುಂಬ ವರ್ಗಕ್ಕೆ ದುಖ ಸಹಿಸುವ ಶಕ್ತಿ ದಯಪಾಲಿಸಲೆಂದು ಪ್ರಾರ್ಥಿಸಿದ್ದಾರೆ, ಅಲ್ಲದೆ ಸಂಸದ ಕೆ ರಾಜಶೇಖರ ಹಿಟ್ನಾಳ ಶಾಸಕ ಕೆ ರಾಘವೇಂದ್ರ ಹಿಟ್ನಾಳ್ ಮಾಜಿ ಶಾಸಕ ಕೆ ಬಸವರಾಜ ಹಿಟ್ನಾಳ ಅವರು ಸಹ ತೀವ್ರ ಸಂತಾಪ ಸೂಚಿಸಿದ್ದಾರೆ. ಮೃತರ ಅಂತ್ಯಕ್ರಿಯೆ, ಮಂಗಳವಾರ ಸಂಜೆ ವೇಳೆಗೆ ನಗರದ ಕಿನ್ನಾಳ ರಸ್ತೆಯಲ್ಲಿರುವ ಕಿನ್ನಾಳ ಖಬ್ರಸ್ಥಾನಸ್ಥಾನ ದಲ್ಲಿ ಧಾರ್ಮಿಕ ವಿಧಿ ವಿಧಾನ ದೊಂದಿಗೆ ನೆರವೇರಿಸಲಾಯಿತು ಅವರ ಹಿರಿಯ ಮಗ ಅಯ್ಯುಬ , ಅಳಿಯ ಪ್ರೊಫೆಸರ ಶೇಕ್ ಮೆಹಬೂಬ್ ಇನ್ನೋರ್ವ ಅಳಿಯ ಕರ್ನಾಟಕ ಮುಸ್ಲಿಂ ಯುನಿಟಿ ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷ ಮಹಮ್ಮದ್ ಜೀಲಾನ ಕಿಲ್ಲೆದಾರ್ ಮೈಲೈಕ್ ಟೈಲರ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಸಾರ್ವಜನಿಕರು ಸಮಾಜ ಬಾಂಧವರು ಪಾಲ್ಗೊಂಡಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State